ಸಂಪುಟ : 8 ಸಂಚಿಕೆ : 149 ಪುಟ : 4 ಬೆಲೆ : 3.00 ಶನಿವಾರ ಜುಲೈ 15, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 149 Pages : 4 Price : 3.00 Saturday July 15, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## 17 ರಿಂದ ವಾಣಿಜ್ಯ ಪರೀಕ್ಷೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ನಡೆಸುವ ಬೆರಳಚ್ಚು ಮತ್ತು ಶೀಘ್ರಲಿಪಿ ವಾರ್ಷಿಕ ಪರೀಕ್ಷೆಗಳು ರಾಜ್ಯಾದಂತ ನಡೆಯಲಿದ್ದು, ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳು ಗದಗ ವಿಭಾಗದಲ್ಲಿ ಗದಗ ಜಿಲ್ಲಾ ಶಿಕ್ಷಕರ ತರಬೇತಿ ಕೇಂದ್ರ, (ಡಯೆಟ್) ಕಳಸಾಪೂರ ರಸ್ತೆ, ಮೆಣಸಗಿ ಕಾಲೇಜು ಹತ್ತಿರ, ಗದಗ ಇಲ್ಲಿ ಜುಲೈ 17ರಿಂದ ಜುಲೈ 26ರವರೆಗೆ ನಡೆಯಲಿವೆ.

ಸಂಬಂಧಪಟ್ಟ ವಿದ್ಯಾರ್ಥಿಗಳು ಬೆರಳಚ್ಚು ಮತ್ತು ಶೀಘ್ರಲಿಪಿ ವಿದ್ಯಾಲಯದಲ್ಲಿ ಪ್ರವೇಶ ಪತ್ರಗಳನ್ನು ಪಡೆದು, ದಿನಾಂಕ ಮತ್ತು ಸಮಯಕ್ಕನುಗುಣವಾಗಿ ಅರ್ಧ ಗಂಟೆ ಮುಂಚಿತವಾಗಿಯೇ ಪರೀಕ್ಷೆಗಳಿಗೆ ಹಾಜರಾಗಬೇಕೆಂದು ಶ್ರೀ ಕಲ್ಮೇಶ್ವರ ಬೆರಳಚ್ಚು ಮತ್ತು ಕಂಪ್ಯೂಟರ್ ವಿದ್ಯಾಲಯದ ಪ್ರಾಚಾರ್ಯ ಡಾ. ತಯಬಅಲಿ ಅ.ಹೊಂಬಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

**■ ವಿಜಯಸಾಕ್ಷಿ ಸುದ್ದಿ, ಗದಗ**

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಜುಲೈ 16 ರಂದು ಬೆಳಿಗ್ಗೆ:6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಶ್ರೀ ಹರಳಯ್ಯ ಉದ್ಯಾನವನದಲ್ಲಿ ಶಿವಲಿಂಗಯ್ಯ ಹಿರೇಮಠ, ಹೊನ್ನಿಗನೂರ ರವರಿಂದ "ಸುಗಮ ಸಂಗೀತ", ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ವೀರಣ್ಣ ಅಂಗಡಿ ಇವರಿಂದ "ಜನಪದ ಸಂಗೀತ", ಬೆಟಗೇರಿಯ ಕಿತ್ತೂರು ಚನ್ನಮ್ಮ ಉದ್ಯಾನವನದಲ್ಲಿ ಮಲ್ಲಿಕಾರ್ಜುನ ಹೂಗಾರ ಇವರಿಂದ "ಸುಗಮ ಸಂಗೀತ", ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಶ್ರೀ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಗವಿಸಿದ್ದಯ್ಯ ಹಳ್ಳಿಕೇರಿಮಠ ಇವರಿಂದ "ಜನಪದ ಗಾಯನ" ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆಸ್ಕಾಂ ಗ್ರಾಹಕರ ಸಂವಾದ ಸಭೆ ಇಂದು

**■ ವಿಜಯಸಾಕ್ಷಿ ಸುದ್ದಿ, ಗದಗ**

ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳಿನ 3ನೇ ಶನಿವಾರ ಮಧ್ಯಾಹ್ನ 3ರಿಂದ 5 ಗಂಟೆಯವರೆಗೆ ಆಯಾ ಹೆಸ್ಕಾಂ ಉಪವಿಭಾಗಗಳಲ್ಲಿ ಗ್ರಾಹಕರ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಕ್ರಮ ವಹಿಸಲು ಸರ್ಕಾರವು ಆದೇಶಿಸಿರುವ ಪ್ರಯುಕ್ತ ಜುಲೈ 15, ಶನಿವಾರ ಗ್ರಾಹಕರ ಸಂವಾದ ಸಭೆ ನಡೆಸಲಾಗುವುದು.

ಗದಗ ಶಹರ ವ್ಯಾಪ್ತಿಯ ಗ್ರಾಹಕರು–ಗದಗ ಶಹರ ಉಪವಿಭಾಗ, ಮುಳಗುಂದ ನಾಕಾ, ಹೆಸ್ಕಾಂ, ಗದಗ, ಗದಗ ಗ್ರಾಮೀಣ ವ್ಯಾಪ್ತಿಯ ಗ್ರಾಹಕರು–ಗದಗ ಗ್ರಾಮೀಣ ಉಪವಿಭಾಗ, ಮುಳಗುಂದ ನಾಕಾ, ಹೆಸ್ಕಾಂ, ಗದಗ, ಮುಂಡರಗಿ ತಾಲೂಕು ವ್ಯಾಪ್ತಿಯ ಗ್ರಾಹಕರು–ಮುಂಡರಗಿ ಉಪವಿಭಾಗ, ಹೆಸ್ಕಾಂ, ಮುಂಡರಗಿ, ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕು ವ್ಯಾಪ್ತಿಯ ಗ್ರಾಹಕರು–ಲಕ್ಷ್ಮೇಶ್ವರ ಉಪವಿಭಾಗ, ಹುಬ್ಬಳ್ಳಿ ರಸ್ತೆ, ಹೆಸ್ಕಾಂ, ಲಕ್ಷ್ಮೇಶ್ವರ ಈ ಕಚೇರಿಗಳಿಗೆ ಭೇಟಿ ನೀಡಿ ತಮ್ಮ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನಿಗಮದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ವಿಶ್ವಧರ್ಮ ಪ್ರವಚನ ಮಂಗಲೋತ್ಸವ ಇಂದು

**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಪಟ್ಟಣದ ಜಗದ್ಗುರು ತೋಂಟ–ದಾರ್ಯ ಶಾಖಾಮಠದಲ್ಲಿ ಶನಿವಾರ ಸಂಜೆ 7 ಗಂಟೆಗೆ ವಿಶ್ವಧರ್ಮ ಪ್ರವಚನ ಮಂಗಲೋತ್ಸವ ಜರುಗಲಿದೆ.

ಬೆಳಿಗ್ಗೆ 9 ಗಂಟೆಗೆ ಯಡಿಯೂರು ಶ್ರೀಸಿದ್ಧಲಿಂಗ ಶಿವಯೋಗಿ, ಶ್ರೀ ಬಸವಣ್ಣನವರ ಭಾವಚಿತ್ರ ಹಾಗೂ ವಚನ ಗ್ರಂಥಗಳ ಭವ್ಯ ಮೆರವಣಿಗೆಯು ಪ್ರಮುಖ ಬೀದಿಗಳ ಮೂಲಕ ಸಾಗಲಿದೆ. ಮೆರವಣಿಗೆಯಲ್ಲಿ ಶ್ರೀ ಬಿಳಿಗಿರಿ ರಂಗನಾಥ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಘದಿಂದ ಡೊಳ್ಳು ಕುಣಿತ, ಕಂಸಾಳೆ ವಾದ್ಯ ಕಲಾಮೇಳ ಪಾಲ್ಗೊಳ್ಳಲಿದೆ. ಸಂಜೆ 7 ಗಂಟೆಗೆ ಸಭಾ ಕಾರ್ಯಕ್ರಮದಲ್ಲಿ ಡಾ. ತೋಂಟದ ಶ್ರೀ ಸಿದ್ಧರಾಮ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶ್ರೀ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಶ್ರೀ ಗೋಣಿರುದ್ರ ದೇವರು ಸಮ್ಮುಖ ವಹಿಸುವರು. ಮಾಜಿ ಸಚಿವ ಎಸ್ ಎಸ್ ಪಾಟೀಲ ಆಗಮಿಸಲಿದ್ದು, ಸಂಗಮೇಶ ಪಾಟೀಲ, ಬಸವರಾಜ ಹೊನ್ನಿಗನೂರು ಸಂಗೀತ ಸೇವೆ ನೀಡುವರು ಎಂದು ಪ್ರವಚನ ಸಮಿತಿಯ ಅಧ್ಯಕ್ಷ ಪವನ ಚೋಪ್ರಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇನ್‌ಸ್ಪೈರ್ ಅವಾರ್ಡ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ

**■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ**



ಇಲ್ಲಿನ ಆರ್ ಕೆ ಕುಲಕರ್ಣಿ ಸರಕರಿ ಪ್ರೌಢಶಾಲೆಯ ವಿದ್ಯಾರ್ಥಿ ವಿಕಾಸ ರಾಮನಗೌಡ ಸಂಕನಗೌಡ್ರ ಈಚೆಗೆ ನಡೆದ ರಾಜ್ಯ ಮಟ್ಟದ ಇನ್‌ಸ್ಪೈರ್ ಅವಾರ್ಡ್ ಸ್ಪರ್ಧೆಯಲ್ಲಿ ತಾನು ತಯಾರಿಸಿದ ಮಾದರಿಯನ್ನು ಪ್ರದರ್ಶಿಸಿ, ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾನೆ ಎಂದು ಮುಖ್ಯೋಪಾಧ್ಯಾಯ ಎಸ್ ಬಿ ನಿಡಗುಂದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈರುಳ್ಳಿಯನ್ನು ಕಿತ್ತು ಕಟಾವು ಮಾಡುವ ನೂತನ ಯಂತ್ರ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಿ, ಸ್ಪರ್ಧೆಯಲ್ಲಿ ವಿಜೇತನಾಗಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಶಾಲೆಯ ವಿಜ್ಞಾನ ಶಿಕ್ಷಕಿ ಮಂಜುಳಾ ಜಾಧವ ಅವರ ಮಾರ್ಗದರ್ಶನದಲ್ಲಿ ವಿಕಾಸ ಈ ಯಂತ್ರವನ್ನು ರಚನೆ ಮಾಡಿದ್ದು, ಜುಲೈ 25ರಂದು ಸೂರತ್ಕಲ್‌ನಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಇನ್‌ಸ್ಪೈರ್ ಅವಾರ್ಡ್ ತರಬೇತಿಗೆ ಆಯ್ಕೆಯಾಗಿದ್ದಾನೆ. ವಿದ್ಯಾರ್ಥಿಯ ಈ ಸಾಧನೆಯನ್ನು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಆನಂದರಾವ ಕುಲಕರ್ಣಿ, ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿಯವರು ಶ್ಲಾಘಿಸಿ, ವಿದ್ಯಾರ್ಥಿಗೆ ಮಾರ್ಗದರ್ಶನ ನೀಡಿದ ಶಿಕ್ಷಕಿ ಜಾಧವರನ್ನು ಅಭಿನಂದಿಸಿ ಶುಭ ಕೋರಿದ್ದಾರೆ.

### ನಾಳೆ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಸ್ಥಾಪಿಸಿದ 'ಅವ್ವ ದತ್ತಿ ಪ್ರಶಸ್ತಿ' ಪ್ರದಾನ ಸಮಾರಂಭ

# ಪತ್ರಕರ್ತೆ ರಶ್ಮಿಗೆ ರಾಜ್ಯಮಟ್ಟದ ಪ್ರಶಸ್ತಿ





> ಸಮಾಜದಲ್ಲಿ ನಕಲಿ ಪತ್ರಕರ್ತರ ಹಾವಳಿ ಹೆಚ್ಚಾಗಿದ್ದು, ನೈಜ ಪತ್ರಕರ್ತರಿಗೆ ಬೆಲೆ ಇಲ್ಲದಂತಾಗಿದೆ. ಏಕಾಏಕಿ ಪತ್ರಕರ್ತರೆಂದು ಬಿಂಬಿಸಿಕೊಂಡು, ವಿವಿಧ ಇಲಾಖೆಗಳಲ್ಲಿ ವಸೂಲಿ ಮಾಡುವ ಹವ್ಯಾಸ ಆರಂಭವಾಗಿದೆ. ನೈಜ ಪತ್ರಕರ್ತರು ಈ ಹವ್ಯಾಸದ ವಿರುದ್ಧ ಧ್ವನಿ ಎತ್ತಬೇಕು.
>
> **– ಡಾ. ಬಸವರಾಜ ಧಾರವಾಡ.**
> ಅವ್ವ ಸೇವಾ ಟ್ರಸ್ಟ್ ಸಂಚಾಲಕರು.

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಅವ್ವ ಸೇವಾ ಟ್ರಸ್ಟ್‌ನವರು ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ದತ್ತಿನಿಧಿ ಸ್ಥಾಪಿಸಿದ್ದು, ಪತ್ರಕರ್ತೆಯರಿಗೆ ನೀಡುವ ರಾಜ್ಯ ಮಟ್ಟದ ಮೊದಲ ಪ್ರಶಸ್ತಿಗೆ ಪ್ರಜಾವಾಣಿಯ ಮುಖ್ಯ ಉಪ ಸಂಪಾದಕಿ ರಶ್ಮಿ ಎಸ್ ಆಯ್ಕೆಯಾಗಿದ್ದಾರೆ. ಜುಲೈ 16ರಂದು ನಗರದ ಶ್ರೀನಿವಾಸ ಭವನದಲ್ಲಿ ನಡೆಯಲಿರುವ ಜಿಲ್ಲಾ ಮಟ್ಟದ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್.ರಶ್ಮಿಯವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪತ್ರಕರ್ತರ ಸಂಘದ ಅಧ್ಯಕ್ಷ ರಾಜು ಹೆಬ್ಬಳ್ಳಿ, ಅವ್ವ ಸೇವಾ ಟ್ರಸ್ಟ್ ಸಂಚಾಲಕ ಡಾ.ಬಸವರಾಜ ಧಾರವಾಡ, ಪತ್ರಕರ್ತರ ಸಂಘದ ಕೇಂದ್ರ ಸಮಿತಿಯ ಸದಸ್ಯ ಎಚ್ ಎಂ ಶರೀಫನವರ ತಿಳಿಸಿದರು.

ನಗರದಲ್ಲಿ ಸುದ್ದಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಡಾ.ಬಸವರಾಜ ಧಾರವಾಡ, ಬಸವರಾಜ ಹೊರಟ್ಟಿಯವರು ತಮ್ಮ ತಾಯಿ ಗುರವ್ವ ಶಿವಲಿಂಗಪ್ಪ ಹೊರಟ್ಟಿಯವರ ಸ್ಮರಣಾರ್ಥ ಸ್ಥಾಪಿಸಿರುವ 'ಅವ್ವ ಸೇವಾ ಟ್ರಸ್ಟ್' ದಶಕಗಳಿಂದ ವಿವಿಧ ರಚನಾತ್ಮಕ ಕಾರ್ಯಗಳ ಮೂಲಕ ಸಮಾಜ ಸೇವೆಗೆ ಸಮರ್ಪಿಸಿಕೊಂಡಿದೆ. ನೊಂದವರಿಗೆ ನೆರವು, ಸಾಧಕರಿಗೆ ಪುರಸ್ಕಾರ ನೀಡುತ್ತಿದೆ. ಕಳೆದ 12 ವರ್ಷದಿಂದ ಈ ಸೇವೆಯಲ್ಲಿ ತೊಡಗಿದ್ದೇವೆ. ತೋಂಟದಾರ್ಯಮಠ, ಮುಂಡರಗಿ ಅನ್ನದಾನೀಶ್ವರ ಮಠದಲ್ಲಿ ದತ್ತಿನಿಧಿ ಇಟ್ಟು ಸಮಾಜಮುಖಿ ಚಿಂತನೆಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ರಾಜು ಹೆಬ್ಬಳ್ಳಿ ಮಾತನಾಡಿ, ಸಚಿವ ಎಚ್ ಕೆ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಪ್ರತಿಭಾ ಪುರಸ್ಕಾರ ವಿತರಿಸಲಿದ್ದಾರೆ. ಶಾಸಕರಾದ ಸಿ ಸಿ ಪಾಟೀಲ, ಜಿ ಎಸ್ ಪಾಟೀಲ, ಚಂದ್ರು ಲಮಾಣಿ, ವಿ ಪ ಸದಸ್ಯ ಎಸ್ ವಿ ಸಂಕನೂರ, ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್ ಸೇರಿದಂತೆ ಇತರರು ಕಾರ್ಯಕ್ರಮ ಉಪಸ್ಥಿತರಿರುವರು.

ಜಿಲ್ಲೆಯಲ್ಲಿ 6 ಜನ ಪತ್ರಕರ್ತರಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು ಎಂದರು. ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್ ಎಂ ಶರೀಫನವರ್ ಮಾತನಾಡಿ, ಎಲ್ಲರ ಸಹಕಾರದಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಲು ಕೋರಿದರು. ಟ್ರಸ್ಟ್‌ನ ಸಹ ಸಂಚಾಲಕ ಎಸ್ ಎಂ ಅಗಡಿ ಉಪಸ್ಥಿತರಿದ್ದರು.

### ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಆರ್ ಬಿ ಕುಲಕರ್ಣಿ ಆರೋಪ

## ರೈತಪರ ಯೋಜನೆಗಳನ್ನು ನಿಲ್ಲಿಸುವ ಹುನ್ನಾರ



> ಚುನಾವಣೆಯ ಪೂರ್ವದಲ್ಲಿ ಮೇಕೆದಾಟು ಸಹಿತ ಇತರ ನೀರಾವರಿ ಯೋಜನೆ ಬಗ್ಗೆ ಕಾಳಜಿ ವ್ಯಕ್ತಪಡಿಸಿದ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರರು, ಅಧಿಕಾರಕ್ಕೆ ಬರುತ್ತಿದ್ದಂತೆ ನೀರಾವರಿ ಯೋಜನೆಗಳನ್ನು ಮರೆತಿದ್ದಾರೆ. ರೈತ ದೇಶದ ಬೆನ್ನೆಲುಬು ಎನ್ನುತ್ತಲೇ ರೈತಪರ ಯೋಜನೆಗಳನ್ನು ನಿಲ್ಲಿಸುವ ಹುನ್ನಾರ ನಡೆಸಿದ್ದಾರೆ.
>
> **– ಆರ್ ಬಿ ಕುಲಕರ್ಣಿ.**
> ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷರು.

**■ ವಿಜಯಸಾಕ್ಷಿ ಸುದ್ದಿ, ಗದಗ**


ಕಾಂಗ್ರೆಸ್ ಸರಕಾರದ 5 ಗ್ಯಾರಂಟಿ ಯೋಜನೆಗಳನ್ನು ನಾವು ಸ್ವಾಗತಿಸುತ್ತೇವೆ. ಆದರೆ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಹಲವು ಜನಪರ ಯೋಜನೆಗಳನ್ನು ರದ್ದುಗೊಳಿಸುವುದು ಸರಿಯಲ್ಲ ಎಂದು ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಆರ್ ಬಿ ಕುಲಕರ್ಣಿ ಹೇಳಿದರು.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರಕಾರ ದ್ವೇಷದ ರಾಜಕಾರಣಕ್ಕೆ ಮುಂದಾಗಿದೆ. ಅಧಿಕಾರಕ್ಕೇರಿದ ನಂತರ ಬಿಜೆಪಿ ಸರಕಾರ ಜಾರಿಗೆ ತಂದಿದ್ದ ರೈತಪರ ಕಾರ್ಯಕ್ರಮಗಳನ್ನು ರದ್ದು ಮಾಡುವ ಕಾರ್ಯಕ್ಕೆ ಕೈ ಹಾಕಿದೆ. ಇಂತಹ ಕಾರ್ಯಕ್ರಮಗಳನ್ನು ರದ್ದುಗೊಳಿಸಿದರೆ ಹೋರಾಟ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು.

ಪ್ರಸ್ತುತ ಜಾರಿಯಲ್ಲಿದ್ದ ಎಪಿಎಂಸಿ ಕಾಯ್ದೆಯನ್ನು ರದ್ದು ಮಾಡಿದ್ದಾರೆ. ಈ ಕಾಯ್ದೆಯಡಿ ▶▶3ನೇ ಪುಟಕ್ಕೆ

## ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ ಕಾರ್ಯಕ್ರಮ

**■ ವಿಜಯಸಾಕ್ಷಿ ಸುದ್ದಿ, ಗದಗ**



ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ಜುಲೈ 15 ಹಾಗೂ 16 ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದು ಪ್ರವಾಸದ ವಿವರ ಇಂತಿದೆ:

ಜುಲೈ 15 ರಂದು ಸಂಜೆ 6.30 ಗಂಟೆಗೆ ಚನ್ನಗಿರಿಯಿಂದ ರಸ್ತೆ ಮೂಲಕ ಗದುಗಿಗೆ ಆಗಮಿಸುವರು. ಸಂಜೆ 7.30 ಗಂಟೆಗೆ ಗದಗನ ಗಾಂಧಿ ನಗರದಲ್ಲಿನ ಹಾಲಕೆರೆಮಠ ಆನಂದಾಶ್ರಮದ 192 ನೇ ಶಿವಾನುಭವ ಸಂಪದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾಸ್ತವ್ಯ ಮಾಡುವರು. ಜುಲೈ 16 ರಂದು ಬೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಅನ್ನಭಾಗ್ಯ ▶▶3ನೇ ಪುಟಕ್ಕೆ

## ಡಿಪ್ಲೋಮಾ ಪ್ರವೇಶಕ್ಕೆ ಅವಕಾಶ

**■ ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಅಡಿಯಲ್ಲಿ ನೂತನವಾಗಿ ಪ್ರಾರಂಭವಾದ ರೋಣ ತಾಲೂಕಿನ ಹೊಳೆ ಆಲೂರು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ 2023–24ನೇ ಶೈಕ್ಷಣಿಕ ಸಾಲಿಗೆ ಎಸ್.ಎಸ್.ಎಲ್.ಸಿ. / ತತ್ಸಮಾನ ಪಾಸಾದ ವಿದ್ಯಾರ್ಥಿಗಳಿಗೆ 3 ವರ್ಷದ ಡಿಪ್ಲೋಮಾಕ್ಕೆ ನೇರ ಪ್ರವೇಶಾತಿ ಪ್ರಾರಂಭಿಸಲಾಗಿದೆ.

ಸಂಸ್ಥೆಯಲ್ಲಿ ಕಂಪ್ಯೂಟರ್ ಸೈನ್ಸ್ ,ಇಂಜಿನಿಯರಿಂಗ್ ಹಾಗೂ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜನಿಯರಿಂಗ್ ಕೋರ್ಸಗಳಿಗಾಗಿ ತಲಾ 63 ಸೀಟುಗಳಂತೆ ಒಟ್ಟು 126 ಸೀಟುಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಿದ್ದು, ಪ್ರವೇಶ ಪಡೆಯಲು ಎಸ್.ಎಸ್.ಎಲ್.ಸಿ/ ತತ್ಸಮಾನ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ವಿದ್ಯಾರ್ಥಿಯ ಆಧಾರ ಪ್ರತಿ, 6 ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಸಲ್ಲಿಸಿ ಪ್ರವೇಶ ಪಡೆದುಕೊಳ್ಳಬಹುದಾಗಿದೆ.

ನಿಗದಿತ ಸೀಟುಗಳು ಮಾತ್ರ ಇರುವುದರಿಂದ ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 8317433922 ಸಂಪರ್ಕಿಸಬಹುದಾಗಿದೆ.

### ತನಿಖಾಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ರಾಜೇಶ್ ಹುದ್ದಾರ ಕರೆ

## ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸಿ

**■ ವಿಜಯಸಾಕ್ಷಿ ಸುದ್ದಿ, ಗದಗ**



ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವುದು ಹಾಗೂ ಚಾಲನಾ ಸಿಬ್ಬಂದಿಗಳಲ್ಲಿ ಶಿಸ್ತು ಮೂಡಿಸುವ ನಿಟ್ಟಿನಲ್ಲಿ ತನಿಖಾಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ತನಿಖಾಧಿಕಾರಿಗಳು ಸಾರಿಗೆ ಆದಾಯ ಸೋರಿಕೆ ತಡೆಗಟ್ಟಲು ಹೆಚ್ಚಿನ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು. ಉತ್ತಮ ಗುಣಮಟ್ಟದ ಪ್ರಕರಣಗಳನ್ನು ಪತ್ತೆ ಮಾಡಬೇಕು ಎಂದು ಮುಖ್ಯ ಸಂಚಾರ ವ್ಯವಸ್ಥಾಪಕ ರಾಜೇಶ್ ಹುದ್ದಾರ ತಿಳಿಸಿದರು.

ಅವರು, ವಾಕರಸಾ.ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ತನಿಖಾಧಿಕಾರಿಗಳ ಪ್ರಗತಿ ಪರಿಶೀಲನೆ ಮಾಡಿದ ನಂತರ ಮಾತನಾಡಿದರು.

ಉಪ ಮುಖ್ಯ ಸಂಚಾರ ವ್ಯವಸ್ಥಾಪಕ ಎಚ್.ರಾಮನಗೌಡರ ಮಾತನಾಡಿ, ಶಕ್ತಿ ಯೋಜನೆ ಜಾರಿಯಾದ ನಂತರ ಮಹಿಳೆಯರು ಸೇರಿದಂತೆ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ನಿಗದಿತ ▶▶3ನೇ ಪುಟಕ್ಕೆ

## ಇಂದು ಅನ್ನಭಾಗ್ಯ ಯೋಜನೆ ನೇರ ನಗದು ವರ್ಗಾವಣೆಗೆ ಚಾಲನೆ

**■ ವಿಜಯಸಾಕ್ಷಿ ಸುದ್ದಿ, ಗದಗ**




ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಹಾಗೂ ಕರ್ನಾಟಕ ಆಹಾರ, ನಾಗರಿಕ ಸರಬರಾಜು ನಿಗಮ ನಿಯಮಿತದಿಂದ ಅನ್ನಭಾಗ್ಯ ಯೋಜನೆ ನೇರ ನಗದು ವರ್ಗಾವಣೆ ( ಡಿಬಿಟಿ) ಗೆ ಚಾಲನಾ ಸಮಾರಂಭವು ಜುಲೈ 16 ರಂದು ಬೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ದಲ್ಲಿ ಜರುಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರಾದ ಕೆ.ಎಚ್.ಮುನಿಯಪ್ಪ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು.

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಶಿವಕುಮಾರ ಉದಾಸಿ, ಪಿ.ಸಿ. ಗದ್ದಿಗೌಡರ, ನರಗುಂದ ಶಾಸಕ ಸಿ.ಸಿ.ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ್, ರೋಣ ಶಾಸಕ ಜಿ.ಎಸ್.ಪಾಟೀಲ, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ–ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಸಿಖಾ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆಯ ಕಾರ್ಯದರ್ಶಿ ಎಂ.ಟಿ. ರೇಜು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರಾದ ಶ್ರೀಮತಿ ಕನಗವಲ್ಲಿ ಎಂ, ಕೆ.ಎಫ್.ಸಿ.ಎಸ್.ಸಿ. ವ್ಯವಸ್ಥಾಪಕ ನಿರ್ದೇಶಕರಾದ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಆಗಮಿಸುವರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಸುಶೀಲಾ ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಗಂಗಪ್ಪ ಎಂ, ಕೆ.ಎಫ್.ಸಿ.ಎಸ್.ಸಿ. ಜಿಲ್ಲಾ ವ್ಯವಸ್ಥಾಪಕ ಲಕ್ಷ್ಮೀ ಶಿವಾಜಿ, ಜಿಲ್ಲಾ ಖಜಾನೆ ಉಪನಿರ್ದೇಶಕ ಹರಿನಾಥ ಬಾಬು ವಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ನಗರಸಭೆಯಿಂದ ನಿಷೇಧಿತ ಏಕ ಬಳಕೆಯ ಪ್ಲಾಸ್ಟಿಕ್ ಜಪ್ತಿ



**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ–ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಹಳೆ ಬಸ್‌ಸ್ಟಾಂಡ್ ರಸ್ತೆ, ಬ್ಯಾಂಕ್ ರಸ್ತೆ, ಹಳೇ ಬಸ್ ನಿಲ್ದಾಣದ ಒಳಗಡೆ, ಜನತಾ ಬಜಾರ ರಸ್ತೆ, ನಾಮಜೋಶಿ ರಸ್ತೆ, ಸ್ಟೇಷನ್ ರಸ್ತೆ, ಹುಯಿಲಗೋಳ ವೃತ್ತ ಹೀಗೆ ವಿವಿಧ ಪ್ರದೇಶಗಳಲ್ಲಿರುವ ಅಂಗಡಿಗಳು, ಬೇಕರಿ, ಪ್ಲಾಸ್ಟಿಕ್ ಮಾರಾಟ ಅಂಗಡಿಗಳು, ಹೋಲ್‌ಸೇಲ್ ಕಿರಾಣಿ ಅಂಗಡಿಗಳು, ಸ್ಟೇಷನರಿ ಅಂಗಡಿಗಳು, ಬಟ್ಟೆ ಅಂಗಡಿಗಳಿಗೆ ನಗರಸಭೆ ಸಿಬ್ಬಂದಿಗಳು ದಿಢೀರ್ ದಾಳಿ ನಡೆಸಿ, ಒಟ್ಟು 150 ಕೆಜಿ ಏಕ ಬಳಕೆ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಹಾಗೂ ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳನ್ನು ವಶಪಡಿಸಿಕೊಂಡು, ಘನ ತ್ಯಾಜ್ಯ ವಿಲೇವಾರಿ ಘಟಕ್ಕೆ ▶▶3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ಚಿನ್ನಕ್ಕೆ ತುಕ್ಕು ಹಿಡಿದರೆ ಕಬ್ಬಿಣದ ಗತಿಯೇನು!

–ಗಾದೆ

## ಸಂಪಾದಕೀಯ

# ರಾಜ್ಯದ ಸರ್ಕಾರಿ ಜಾಗ ಖಾಸಗಿ ಸಂಸ್ಥೆಗೆ ಪರಭಾರೆ ಆಗದಿರಲಿ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಗೆ ಸೇರಿದ ಜನ ಸೇವಾ ಟ್ರಸ್ಟಿಗೆ ಮಂಜೂರಾಗಿದ್ದ 33 ಗುಂಟೆ ಗೋಮಾಳ ಜಮೀನು ಹಸ್ತಾಂತರವನ್ನ ತಡೆ ಹಿಡಿದಿದೆ. ಹಿಂದಿನ ಬಿಜೆಪಿ ಸರ್ಕಾರವು ನೀಡಿದ್ದ ಆದೇಶವನ್ನು ಕಾಂಗ್ರೆಸ್ ಸರ್ಕಾರ ಹಿಂಪಡೆದಿದೆ. ಬೆಂಗಳೂರು ದಕ್ಷಿಣ ತಾಲೂಕಿನ ಕುರಬರಹಳ್ಳಿ ಗ್ರಾಮದ ವ್ಯಾಪ್ತಿಯ 35 ಎಕರೆ 33 ಗಂಟೆ ಗೋಮಾಳ ಜಮೀನನ್ನು ಮಂಜೂರು ಮಾಡಿತ್ತು.

ಈ ಹಿಂದೆ ಬಿಜೆಪಿ ಸರ್ಕಾರದ ಈ ಆದೇಶವನ್ನು ಸಚಿವ ಕೃಷ್ಣ ಬೈರೇಗೌಡ ತಡೆ ಹಿಡಿದಿದ್ದಾರೆ. ಅಷ್ಟಕ್ಕೂ ಸರ್ಕಾರಿ ಒಡೆತನದ ಯಾವುದೇ ಜಮೀನು ಖಾಸಗಿ ಸಂಸ್ಥೆಯೊಂದಕ್ಕೆ ಪರಭಾರೆ ಆಗಬಾರದು. ಬಿಜೆಪಿ ಸರ್ಕಾರ ಮಾತ್ರವಲ್ಲದೇ ಕಾಂಗ್ರೆಸ್ ಸರ್ಕಾರವು ಖಾಸಗಿ ಸಂಸ್ಥೆಯೊಂದಕ್ಕೆ ಸರ್ಕಾರಿ ಜಮೀನು ಹಸ್ತಾಂತರ ಮಾಡಬಾರದು.

ರಾಜ್ಯದಲ್ಲಿ ಯಾವುದೇ ಪಕ್ಷ ಅಧಿಕಾರದಲ್ಲಿರಲಿ. ಆಯಾ ಪಕ್ಷದ ತತ್ವ ಸಿದ್ಧಾಂತ ಏನೇ ಇರಲಿ. ಆದರೂ ಸರ್ಕಾರಿ ಒಡೆತನದ ಭೂಮಿಯನ್ನು ಹೊಂದುವ ಅಧಿಕಾರದಲ್ಲಿದ್ದರೂ ಸಹ ಸರ್ಕಾರ ಅಂತಹದ್ದಕ್ಕೆಲ್ಲ ಅವಕಾಶ ನೀಡಬಾರದು. ಬಿಜೆಪಿ ಕೋಮುವಾದಿ ಸಂಘಟನೆ ಒಂದಕ್ಕೆ ಜಮೀನು ನೀಡಿದರೆ, ಕಾಂಗ್ರೆಸ್ ಜಾತ್ಯತೀತ ಸಂಘಟನೆಯೊಂದಕ್ಕೆ ಜಮೀನು ನೀಡುತ್ತದೆ.

ಹೀಗಾಗಿ ಪಕ್ಷ ಯಾವುದೇ ಅಧಿಕಾರದಲ್ಲಿರಲಿ. ಜನರ ಆಸ್ತಿಯನ್ನು ಯಾವುದೇ ಒಂದು ಸಂಘಟನೆಗೆ ಕೊಡುವುದು ಸರಿಯಲ್ಲ. ಅದು ಯಾವುದೇ ಸಂಘಟನೆ ಇರಲಿ ಸರ್ಕಾರ ಇನ್ನು ಮುಂದೆ ಯಾವುದೇ ಸಂಸ್ಥೆಗೂ ಜಮೀನು ನೀಡುವಂತಹ ಕೆಲಸಕ್ಕೆ ಮುಂದಾಗಬಾರದು.

ಸಂಘ ಸಂಸ್ಥೆಗಳು ಜನಸೇವೆ ಮಾಡುತ್ತಿದ್ದರೆ ತಮ್ಮದೇ ಆದ ಜಮೀನು ಖರೀದಿ ಮಾಡಲು ಅವಕಾಶವಿದೆ. ಸಂಘದ ಕಾರ್ಯ ಚಟುವಟಿಕೆಗಳಿಗಾಗಿ ಪ್ರತಿಯೊಂದಕ್ಕೂ ಸರ್ಕಾರದ ಮೇಲೆ ಅವಲಂಬಿಸದೆ ಜಮೀನು ಖರೀದಿ ಮಾಡುವಷ್ಟು ಆರ್ಥಿಕ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ ಹೊಂದುವುದು ಕೂಡ ಅಗತ್ಯವಾಗಿದೆ.

ಒಂದೊಮ್ಮೆ ಸಂಘ ಸಂಸ್ಥೆಗಳು ಜಮೀನು ಹೊಂದಿದ್ದರೆ, ಅಂತಹ ಜಾಗದಲ್ಲಿ ಕಟ್ಟಡ ಅಥವಾ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದ ನೆರವು ಪಡೆಯಬಹುದು. ಆದರೆ ಪ್ರತಿಯೊಂದಕ್ಕೂ ಸರಕಾರದ ನೆರವು ನಿರೀಕ್ಷಿಸುವುದು ಸರಿಯಲ್ಲ.

ಸರ್ಕಾರವು ಈ ವಿಷಯದಲ್ಲಿ ಗಟ್ಟಿ ನಿರ್ಧಾರವನ್ನು ತೆಗೆದುಕೊಳ್ಳಬೇಕಿದೆ. ಯಾವುದೇ ಕಾರಣಕ್ಕೂ ಸರ್ಕಾರಿ ಭೂಮಿಯನ್ನು ಪರಾಭಾರೆ ಮಾಡುವುದಿಲ್ಲ ಎನ್ನುವ ಕಾನೂನು ರೂಪಿಸಬೇಕಿದೆ. ವಿಶೇಷವಾಗಿ ಗೋಮಾಳ ಜಮೀನನ್ನು ಅನ್ಯ ಉದ್ದೇಶಕ್ಕಾಗಿ ಬಳಕೆ ಮಾಡುವುದಿಲ್ಲ ಅನ್ನುವ ಕಾನೂನು ಮಾಡಿದರೆ ಸರಕಾರಿ ಆಸ್ತಿ ರಕ್ಷಣೆ ಮಾಡಿದಂತಾಗುತ್ತದೆ.

(ಪ್ರಗತಿಪರ ಮುಂಗಡಪತ್ರ ಮಂಡಿಸಿದ ಮುಖ್ಯಮಂತ್ರಿ ಸಿದ್ಧರಾಮಯ್ಯರ ಗೌರವಾರ್ಥ ಕವನ)

## ಸಾಗಲಿ ಪಯಣ



ನುಡಿದಂತೆ ನಡೆಯುತ್ತಿದ್ದೀರಿ ನೀವು
ಅದನು ಕಂಡು ಸಂತಸ ಪಡೆಯುತ್ತಿದ್ದೇವೆ ನಾವು
ರೈತರ ಭಾಗ್ಯದ ಬಾಗಿಲು ತೆರೆಯಲು
ನೇಕಾರರ, ಮೀನುಗಾರರ, ಅಂಗವಿಕಲರ
ಬಾಳು ಹಸನಾಗಲು ನಿಮ್ಮ ಕಾರ್ಯಕ್ರಮ
ಕ್ರಾಂತಿಕಾರಕ

ಸರ್ವರಿಗೂ ಸಮಬಾಳು ನಿಮ್ಮ
ಕೆಚ್ಚೆದೆಯ ನೀತಿ ಸರ್ವರಿಗೂ ಅಚ್ಚುಮೆಚ್ಚು
ನಿಮ್ಮ ಪಂಚ ಗ್ಯಾರಂಟಿಗಳು ಬದುಕಿನ
ಬವಣೆ ನೀಗಿಸುವ ಪಂಚ ಸೂತ್ರಗಳು

ಟೀಕೆಗಳು ಸಾಯಲಿ ಕೆಲಸಗಳು ಉಳಿಯಲಿ
ಎಂಬ ತತ್ವ ಕಾಯಕವೇ ಕೈಲಾಸ ತತ್ವದ ಪ್ರತಿಬಿಂಬ
ಮೈಲಾರಲಿಂಗೇಶ್ವರ ಕಪ್ಪತ್ತಮಲ್ಲೇಶ್ವರರ ಕೃಪೆಯಿಂದ
ಸಾಗಲಿ ನಿಮ್ಮ ಪಯಣ
ದೆಹಲಿ ಗದ್ದುಗೆ ಹಿಡಿಯುವ ತನಕ

–ಹು. ಗ. ಸಜ್ಜನರ.

# ಆಷಾಢ ಕೊನೆಯ ಶುಕ್ರವಾರ: ಚಾಮುಂಡೇಶ್ವರಿಗೆ ನಾಗಲಕ್ಷ್ಮೀ ಅಲಂಕಾರ

■ ವಿಜಯಸಾಕ್ಷಿ ಸುದ್ದಿ, ಮೈಸೂರು

ಇಂದು ಕೊನೆಯ ಆಷಾಢ ಶುಕ್ರವಾರದ ಸಂಭ್ರಮ. ನಾಡ ಅಧಿದೇವತೆಗೆ ವಿಶೇಷ ಲಕ್ಷ್ಮೀ ಅಲಂಕಾರ ಮಾಡಲಾಗಿದ್ದು, ಇದರ ಜೊತೆಗೆ ದೇವಾಲಯದ ಒಳಭಾಗದಲ್ಲಿ ವಿವಿಧ ಬಗೆಯ ಹೂವುಗಳಿಂದ ಅಲಂಕಾರ ಮಾಡಲಾಗಿದೆ. ಭಕ್ತರು ಬೆಳಗ್ಗೆಯಿಂದಲೇ ತಾಯಿಯ ದರ್ಶನ ಪಡೆಯುತ್ತಿದ್ದು, ರಾತ್ರಿಯವರೆಗೆ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಭಕ್ತರು ಅನುಕೂಲಕ್ಕಾಗಿ ಸರತಿ ಸಾಲಿನ ವ್ಯವಸ್ಥೆ ಹಾಗೂ ಬಿಗಿಯಾದ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೂಡ ಮಾಡಲಾಗಿದೆ.

ಗರ್ಭಗುಡಿಯ ಒಳಗಿರುವ ಮೂಲ ಚಾಮುಂಡೇಶ್ವರಿ ಮೂರ್ತಿಗೆ ಲಕ್ಷ್ಮೀ ಅಲಂಕಾರ ಮಾಡಲಾಗಿದ್ದು, ಉತ್ಸವ ಮೂರ್ತಿಗೆ ನಾಗಲಕ್ಷ್ಮೀ ಅಲಂಕಾರ ಮಾಡಿರುವುದು ಆಕರ್ಷಕವಾಗಿದೆ. ಚಾಮುಂಡಿ ಬೆಟ್ಟದಲ್ಲಿ ಕೊನೆಯ ಹಾಗೂ ನಾಲ್ಕನೇ ಆಷಾಢ ಶುಕ್ರವಾರದ ಸಂಭ್ರಮ ಮನೆ ಮಾಡಿದ್ದು, ಬೆಳಗ್ಗೆ



3:30 ರಿಂದಲೇ ಚಾಮುಂಡಿ ತಾಯಿಯ ಮೂಲ ಮೂರ್ತಿಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ ಹಾಗೂ ಮಹಾಮಂಗಳಾರತಿ ನೆರವೇರಿಸಲಾಗಿದೆ.

ನಾಲ್ಕನೇ ಆಷಾಢ ಶುಕ್ರವಾರದ ನಿಮಿತ್ತ, ಹೆಚ್ಚಿನ ಭಕ್ತರು ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಆಗಮಿಸಿ ತಾಯಿಯ ದರ್ಶನ ಪಡೆಯುತ್ತಿದ್ದಾರೆ.

ಜೊತೆಗೆ ಇಂದು ಕೊನೆಯ ಆಷಾಢ ಶುಕ್ರವಾರ ಆದ್ದರಿಂದ ಚಾಮುಂಡಿ ಬೆಟ್ಟಕ್ಕೆ ಗಣ್ಯರು ಆಗಮಿಸುವ ನಿರೀಕ್ಷೆ ಇದೆ.

ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಸ್ಥಾಪಿಸಿದ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭದ ನಿಮಿತ್ತ ಲೇಖನ

# ಮಾಧ್ಯಮ ಸ್ನೇಹಿತರಿಗೂ ಮಮತೆ ಹಂಚಿದ ಅವ್ವ ಸೇವಾ ಬಳಗ

ಅವ್ವ ಸೇವಾ ಟ್ರಸ್ಟ್ ಹುಬ್ಬಳ್ಳಿ ಇವರು ಸ್ಥಾಪಿಸಿದ ದತ್ತಿನಿಧಿಯಿಂದ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿಯವರ ಸ್ಮರಣಾರ್ಥ ರಾಜ್ಯಮಟ್ಟದಲ್ಲಿ ಮಹಿಳಾ ಪತ್ರಕರ್ತೆಗೆ ನೀಡುವ ದತ್ತಿನಿಧಿಯ ಮೊಟ್ಟಮೊದಲ ಪ್ರಶಸ್ತಿ ಪ್ರಶಸ್ತಿ ಪ್ರದಾನ, ಪತ್ರಿಕಾ ದಿನಾಚರಣೆ ಹಾಗೂ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಜುಲೈ 16ರಂದು ರವಿವಾರ ಬೆಳಿಗ್ಗೆ 10.30ಕ್ಕೆ ಗದುಗಿನ ಶ್ರೀನಿವಾಸ ಭವನದಲ್ಲಿ ಜರುಗಲಿದೆ. ಮೊದಲ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ರಶ್ಮಿ ಎಸ್ ಅವರ ಜೀವಮಾನದ ಸಾಧನೆಯ ಬಗ್ಗೆ ಮೆಲುಕು ಹಾಕೋಣ ಬನ್ನಿ.

ವಿಧಾನಪರಿಷತ್ತಿನ ಸಭಾಪತಿ ಹಾಗೂ ಮೇಲ್ಮನೆಯ ಹಿರಿಯ ಸದಸ್ಯ ಬಸವರಾಜ ಹೊರಟ್ಟಿಯವರು ತಮ್ಮ ತಾಯಿ ಗುರವ್ವ ಶಿವಲಿಂಗಪ್ಪ ಹೊರಟ್ಟಿಯವರ ಸ್ಮರಣಾರ್ಥ 'ಅವ್ವ ಸೇವಾ ಟ್ರಸ್ಟ್'ನ್ನು ಪೂಜ್ಯ ಲಿಂಗೈಕ್ಯ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸನ್ನಿದಾನದಲ್ಲಿ 2011ರಲ್ಲಿ ಪ್ರಾರಂಭಿಸಿದರು. ಅವ್ವನ ಹೆಸರಿನಲ್ಲಿ ಸಮಾಜ ಸೇವೆಗೆ ಸಮರ್ಪಿಸಿಕೊಂಡ ಈ ಸಂಸ್ಥೆ ದಶಕಗಳಿಂದ ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನೇಕರ ಬಾಳಿಗೆ ಬೆಳಕಾಗಿದೆ. ನಾಡಿನ 100ಕ್ಕೂ ಅಧಿಕ ದಿವ್ಯಾಂಗರಿಗೆ ಟ್ರೈಸಿಕಲ್ ನೀಡಿ ಆಸರೆ ಕಲ್ಪಿಸಿದೆ. ಸಮಾಜ ಸೇವೆಯ ಜೊತೆಗೆ ಇತರೆ ಕ್ಷೇತ್ರಗಳಲ್ಲಿ ಅಪ್ರತಿಮ ಸೇವೆ ಮಾಡಿದ ಸಾಧಕರಿಗೆ ಅವ್ವ ಪ್ರಶಸ್ತಿ ನೀಡಿ ಗೌರವಿಸಿದೆ.

ಧಾರವಾಡ ಜಿಲ್ಲೆಯಲ್ಲಿ 1000ಕ್ಕೂ ಅಧಿಕ ಸಸಿಗಳನ್ನು ವಿತರಿಸಿ ಪರಿಸರ ಸಂರಕ್ಷಣೆಗೆ ಅಳಿಲು ಸೇವೆ ಸಲ್ಲಿಸಿದೆ. ಬೆಳಗಾವಿ ವಿಭಾಗದ 48 ಪ್ರತಿಭಾವಂತ ಅಂಧ ವಿಕಲಚೇತನ ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡಿದೆ. 80 ಜನ ಹಿರಿಯ ತಾಯಂದಿರಿಗೆ ಗೌರವ ಸಂಮಾನ ಮಾಡಿದೆ. ಅನಾರೋಗ್ಯ ಪೀಡಿತ ಕುಟುಂಬದ ಮಕ್ಕಳಿಗೆ ಆಸರೆಯಾಗಿದೆ. ಕೂಡು ಕುಟುಂಬದ ಅವಶ್ಯಕತೆಯ ಕುರಿತು ಅರಿವನ್ನು ಮೂಡಿಸುತ್ತಾ ಬಂದಿದೆ. ಬೆಳಗಾವಿ ವಿಭಾಗದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಅವ್ವನ ಮಹತ್ವದ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಿದಾಗ 26 ಸಾವಿರ ಮಕ್ಕಳು ಭಾಗವಹಿಸಿದ ದಾಖಲೆಯೂ ಇದೆ.

ಇಂತಹ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ನೊಂದವರಿಗೆ, ಪ್ರತಿಭಾವಂತರಿಗೆ,



ಸಾಧಕರಿಗೆ, ಅವ್ವ ಸೇವಾ ಟ್ರಸ್ಟ್ ನೆರವಿನ ಹಸ್ತ ಚಾಚಿದೆ. ಅನೇಕ ಸಂಘ-ಸಂಸ್ಥೆಗಳಲ್ಲಿ ದತ್ತಿನಿಧಿ ಸ್ಥಾಪಿಸಿ ಸಮಾಜಮುಖಿ ಚಿಂತನೆಗೆ ದಾರಿ ಮೂಡಿಸಿದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ಇಲ್ಲಿ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿಯವರ ಸ್ಮರಣಾರ್ಥ 2.50 ಲಕ್ಷ ರೂಪಾಯಿ ದತ್ತಿನಿಧಿ ಸ್ಥಾಪಿಸಿ ಪ್ರತಿವರ್ಷ ರಾಜ್ಯಮಟ್ಟದಲ್ಲಿ ಉತ್ತಮ ಮಹಿಳಾ ಪತ್ರಕರ್ತೆಗೆ ಪ್ರಶಸ್ತಿ ನೀಡಲು ಅವಕಾಶ ಕಲ್ಪಿಸಿದ್ದಾರೆ.

ಅವ್ವ ಸೇವಾ ಟ್ರಸ್ಟ್ ಮಾಧ್ಯಮ ಸ್ನೇಹಿತರಿಗೂ ತನ್ನ ಮಮತೆ ಹಂಚುವ ಮೂಲಕ ಆ ಕ್ಷೇತ್ರದಲ್ಲಿ ಜೀವಮಾನದ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಗೌರವಿಸುವ ಕೆಲಸ ಆರಂಭಿಸಿದೆ. ಪತ್ರಕರ್ತೆ ಶ್ರೀಮತಿ ರಶ್ಮಿ ಎಸ್ ಮೊದಲ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಬಾರಿಯ ಪತ್ರಿಕಾ ದಿನಾಚರಣೆಯಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕಳೆದ 23 ವರ್ಷಗಳಿಂದ ಪತ್ರಿಕೋದ್ಯಮದ ಅನುಭವ ಹೊಂದಿದ ರಶ್ಮಿಯವರು ಮೂಲತಃ ಬೀದರನವರು. 1999ರಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯದಿಂದ ಪದವಿ, 2001ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮ ಮತ್ತು ಸಂವಹನದಲ್ಲಿ ಎಂಎ ಪದವಿ ಪಡೆದರು.

ಧಾರವಾಡ, ಕಲಬುರ್ಗಿ, ವಿಜಯಪುರ ಹಾಗೂ ಮೈಸೂರು ವಿಶ್ವವಿದ್ಯಾಲಯಗಳ ಪತ್ರಿಕೋದ್ಯಮ ವಿಭಾಗಗಳಲ್ಲಿ ಅತಿಥಿ ಉಪನ್ಯಾಸ ನೀಡಿರುವ ರಶ್ಮಿ ಪ್ರಜಾವಾಣಿಯ ವೈವಿಧ್ಯಮಯ ಪುರವಣಿಗಳ ಮುಖ್ಯಸ್ಥೆಯಾಗಿ, ಹುಬ್ಬಳ್ಳಿಯ ಬ್ಯುರೋ ಚೀಫ್ ಆಗಿ, ಸುಧಾ ಮತ್ತು ಮಯೂರ ಪತ್ರಿಕೆಯ ಉಪ ಸಂಪಾದಕಿಯಾಗಿ ಸಧ್ಯ ಬೆಂಗಳೂರಿನಲ್ಲಿ ಪ್ರಜಾವಾಣಿಯ ಮುಖ್ಯ ಉಪ ಸಂಪಾದಕಿಯಾಗಿದ್ದಾರೆ. ಪ್ರಜಾವಾಣಿಯಲ್ಲಿ ಮಿದುಮಾತು, ಅಂಕುರ ಅಂಕಣದ ಮೂಲಕ ಓದುಗರ ಗಮನ ಸೆಳೆದವರು. ಉತ್ತರ ಕರ್ನಾಟಕದ ಸಂಭ್ರಮ, ಸಂಕಟ, ಜೀವನಶೈಲಿ, ಪರಂಪರೆಯ ಮಿಸಳ್‌ಆಪ್ಪಾ, ವಿಶೇಷ ವಿಡಿಯೋ ಅಂಕಣ, 118 ಸಂಚಿಕೆಯಾಗಿ ಪ್ರಸಾರಗೊಂಡಿದ್ದು ಹಲವು ಸಂಚಿಕೆಗಳು 10 ಲಕ್ಷಕ್ಕೂ ಮೀರಿದ ವೀಕ್ಷಣೆ ಪಡೆದಿವೆ.

ಪತ್ರಕರ್ತೆ ರಶ್ಮಿ ಎಸ್. ಅವರಿಗೆ ಜೀವಮಾನದ ಸಾಧನೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ದಾವಣಗೆರೆಯ ಎಕ್ಸಲನ್ಸ್ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದ್ದು, ಇದೀಗ ಗದಗ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಅವ್ವ ಸೇವಾ ಟ್ರಸ್ಟ್ ಸ್ಥಾಪಿಸಿರುವ ದತ್ತಿನಿಧಿಯ ಮೊದಲ ಪ್ರಶಸ್ತಿಗೆ ರಶ್ಮಿ ಎಸ್. ಭಾಜನರಾಗಿದ್ದಾರೆ. ಅವರಿಗೆ ಟ್ರಸ್ಟ್ ಹಾಗೂ ಸಂಘದಿಂದ ಹಾಗೂ ಹಿತೈಷಿಗಳಿಂದ ಅಭಿನಂದನೆಗಳು.

– ಡಾ.ಬಸವರಾಜ ಧಾರವಾಡ.
ಸಂಚಾಲಕರು, ಅವ್ವ ಸೇವಾ ಟ್ರಸ್ಟ್, ಗದಗ.

# ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕ ಅಂಗೀಕಾರ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳು ಕೈಗೊಳ್ಳಲಾದ ನಿರ್ಮಾಣ ಕಾಮಗಾರಿಗಳ ಮಟ್ಟವನ್ನು 50 ಲಕ್ಷ ರೂ.ನಿಂದ 1 ಕೋಟಿ ರೂ.ಗೆ ಹೆಚ್ಚಿಸುವ ಉದ್ದೇಶ ಹೊಂದಿರುವ 2023ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ ವಿಧಾನಸಭೆಯಲ್ಲಿ ಇಂದು ಅಂಗೀಕಾರಗೊಂಡಿತು.

ಶಾಸನ ರಚನಾ ಕಲಾಪದಲ್ಲಿ ಮುಖ್ಯಮಂತ್ರಿಗಳ ಪರವಾಗಿ ಕಾನೂನು ಸಚಿವ ಹೆಚ್.ಕೆ ಪಾಟೀಲ್ ಅವರು ಪರ್ಯಾಲೋಚಿಸಿ ಹಲವು ಸದಸ್ಯರು ಚರ್ಚಿಸಿದ ಬಳಿಕ ಸದನದಲ್ಲಿ ಧ್ವನಿ ಮತದ ಅಂಗೀಕಾರ ದೊರೆಯಿತು. ವಿಧೇಯಕ ಕುರಿತು ಮಾತನಾಡಿದ ಹೆಚ್.ಕೆ ಪಾಟೀಲ್ ಅನುಸೂಚಿತ ಜಾತಿ/ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳು ಕೈಗೊಳ್ಳುವ ನಿರ್ಮಾಣ ಕಾಮಗಾರಿ ಮೊತ್ತವನ್ನು 50 ಲಕ್ಷ



ರೂ.ನಿಂದ 1 ಕೋಟಿ ರೂ.ಗೆ ಹೆಚ್ಚಿಸಲಾಗುತ್ತದೆ. ಎಸ್ ಆರ್ ದರ ಗಮನದಲ್ಲಿಟ್ಟುಕೊಂಡು ತಿದ್ದುಪಡಿ ತರಲಾಗಿದೆ. ಶೇ.62ರಷ್ಟು ಮೊದಲ ಟೆಂಡರ್ ನಲ್ಲಿ, ಶೇ.82ರಷ್ಟು 2ನೇ ಟೆಂಡರ್‌ನಲ್ಲಿ ಎಸ್‌ಸಿ-ಎಸ್‌ಟಿ ಸಮುದಾಯದವರು ಭಾಗವಹಿಸಿದ್ದಾರೆ. ಇದು ಸಾಮಾಜಿಕ ನ್ಯಾಯ ಒದಗಿಸಲು ದೊಡ್ಡ ಅಸ್ತ್ರವಾಗಿದೆ ಎಂದು ಹೇಳಿ ಒಪ್ಪಿಗೆ ಸೂಚಿಸುವಂತೆ ಕೋರಿದರು.

ಎಸ್‌ಸಿ-ಎಸ್‌ಟಿ ಸಮುದಾಯಕ್ಕೆ ಆದ್ಯತೆ ಸಿಗಬೇಕು: ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ "ಈ ತಿದ್ದುಪಡಿ ಅಗತ್ಯವಿತ್ತು. ಸ್ವಾಗತಿಸುತ್ತೇವೆ. ಅಂಬೇಡ್ಕರ್ ಅಭಿವೃದ್ಧಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಮೂಲಕ ಎಸ್ ಸಿ - ಎಸ್‌ಟಿ ಸಮುದಾಯದ ಗುತ್ತಿಗೆದಾರರಿಗೆ ಪ್ರೋತ್ಸಾಹ ನೀಡಬೇಕು. ನಮ್ಮ ಪಕ್ಷದ ನಿಲುವು ಕೂಡ ತಿದ್ದುಪಡಿ ತರುವುದೇ ಆಗಿತ್ತು. ಆ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕೊಟ್ಟಂತಾಗುತ್ತದೆ. ಶಿಕ್ಷಣ, ಉದ್ಯೋಗ ಸಬಲೀಕರಣದಲ್ಲಿ ಆ ಸಮುದಾಯಕ್ಕೆ ಆದ್ಯತೆ ಸಿಗಬೇಕು" ಎಂದು ಹೇಳಿದರು.


ಜಿಎಸ್‌ಟಿ ಕಲೆಕ್ಷನ್ ಸೋರಿಕೆ ತಡೆಗೆ ಕ್ರಮ:

# ಇ-ಕಾಮರ್ಸ್ ಮಾರಾಟಗಾರರ ಲೆಕ್ಕ ಪರಿಶೋಧನೆ, ತಪಾಸಣೆ ಹೆಚ್ಚಳ-ಎಚ್.ಕೆ. ಪಾಟೀಲ್

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದಲ್ಲಿ ಜಿಎಸ್‌ಟಿ ಕಲೆಕ್ಷನ್‌ಗೆ ಸಂಬಂಧಿಸಿದಂತೆ ಸೋರಿಕೆ ತಡೆಯಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಇ- ಕಾಮರ್ಸ್ ಮಾರಾಟಗಾರರ ಪರಿಶೋಧನೆ ಮತ್ತು ತಪಾಸಣೆಯನ್ನು ಹೆಚ್ಚಿಸಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್. ಕೆ. ಪಾಟೀಲ್ ಶುಕ್ರವಾರ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ವಿಧೇಯಕ 2023ನ್ನು ಪರಿಗಣನೆಗೆ ಪ್ರಾಯೋಗಿಕವಾಗಿ ಮಂಡಿಸುವ ವೇಳೆ ಸಚಿವರು ಈ ವಿಷಯ ತಿಳಿಸಿದರು. ನಂತರ ವಿಧೇಯಕವನ್ನು ಅಂಗೀಕರಿಸಲಾಯಿತು. ವ್ಯಾಟ್ ಯುಗದಲ್ಲಿ ರಾಜ್ಯದಲ್ಲಿ 5,80,000 ತೆರಿಗೆ ಪಾವತಿದಾರರಿದ್ದರು. ಇಂದು



ಜಿಎಸ್‌ಟಿ ಅವಧಿಯಲ್ಲಿ ಅದು 10 ಲಕ್ಷಕ್ಕೆ ಏರಿದೆ, ಆದ್ದರಿಂದ ಸುಮಾರು 4.2ಲಕ್ಷ ತೆರಿಗೆದಾರರು ನಿವ್ವಳ ತೆರಿಗೆ ವ್ಯಾಪ್ತಿಗೆ ಬಂದಿದ್ದಾರೆ ಎಂದರು.

ಕರ್ನಾಟಕವು 2017-18ರಲ್ಲಿ 44,816 ಕೋಟಿ ರೂ.ಗಳಿಂದ 2022-23ರಲ್ಲಿ 81,848 ಕೋಟಿ ರೂ.ಗೆ ಜಿಎಸ್‌ಟಿ ಸಂಗ್ರಹದಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಪ್ರದರ್ಶಿಸಿದೆ. ನಮ್ಮ ಬಜೆಟ್ ಗಾತ್ರ ಮತ್ತು ಆದಾಯ ಹೆಚ್ಚಳಕ್ಕೆ ಜಿಎಸ್‌ಟಿ ಅಪಾರ ಕೊಡುಗೆ ನೀಡಿದೆ ಎಂದು ಪಾಟೀಲ್ ಹೇಳಿದರು. ಸೇವಾ ವಲಯದಲ್ಲಿ ತೆರಿಗೆ ವಂಚನೆ ಹೆಚ್ಚು ಎಂಬ ಅಭಿಪ್ರಾಯವಿದೆ. ಆದರೆ, ನಮ್ಮ ಕೊಡುಗೆಯ ಶೇಕಡಾ 56 ರಷ್ಟು ಸೇವಾ ವಲಯದಿದ ಬಂದಿದೆ ಎಂದು ಅವರು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಶಿವಲಿಂಗೇಗೌಡ, ಎಚ್.ಡಿ. ರೇವಣ್ಣ ಮತ್ತಿತರರು ಜಿಎಸ್ ಟಿ, ತೆರಿಗೆ ವಂಚನೆ ಪ್ರಕರಣಗಳನ್ನು ಪ್ರಸ್ತಾಪಿಸಿ ಸರ್ಕಾರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಜಿಎಸ್ ಟಿ ಸೋರಿಕೆ ತಡೆಗಟ್ಟಲು ಸರ್ಕಾರ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಸಚಿವರು ತಿಳಿಸಿದರು.

# ಬೆಂಗಳೂರಿನಲ್ಲಿ 11 ದಿನಗಳಲ್ಲಿ ಹೊಸದಾಗಿ 178 ಡೆಂಗ್ಯೂ ಪ್ರಕರಣ ದಾಖಲು

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರಿನಲ್ಲಿ ಕೇವಲ 11 ದಿನಗಳಲ್ಲಿ 178 ಹೊಸ ಡೆಂಗ್ಯೂ ಪ್ರಕರಣಗಳು ದಾಖಲಾಗಿದ್ದು, ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಅಧಿಕಾರಿಗಳು ಸಾರ್ವಜನಿಕರನ್ನು ಎಚ್ಚರಿಸಿದ್ದಾರೆ.

ಆರೋಗ್ಯ ಇಲಾಖೆಯ ಮೂಲಗಳ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿ 3,565 ಜನರಿಗೆ ಡೆಂಗ್ಯೂ ಲಕ್ಷಣಗಳು ಕಾಣಿಸಿಕೊಂಡಿದ್ದು, 1,009 ಜನರ ರಕ್ತದ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಕರ್ನಾಟಕದಲ್ಲಿ 900ಕ್ಕೂ ಹೆಚ್ಚು ಡೆಂಗ್ಯೂ ಪ್ರಕರಣಗಳು ದೃಢಪಟ್ಟಿವೆ. ಇನ್ನು ಬೆಂಗಳೂರಿನಲ್ಲಿ ಇದುವರೆಗೆ 919 ಪ್ರಕರಣಗಳು ವರದಿಯಾಗಿವೆ. ಆದರೆ, ಡೆಂಗೆಯಿಂದ ಯಾವುದೇ




ಸಾವು ನೋವು ಸಂಭವಿಸಿದ ಬಗ್ಗೆ ವರದಿಯಾಗಿಲ್ಲ. 2022ರಲ್ಲಿ ಬಿಬಿಎಂಪಿಯಲ್ಲಿ 585 ಡೆಂಗ್ಯೂ ಪ್ರಕರಣಗಳು ವರದಿಯಾಗಿದ್ದವು.

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯ ಇಂಟರ್ನಲ್ ಮೆಡಿಸಿನ್ ನಿರ್ದೇಶಕಿ ಡಾ.ಶೀಲಾ ಮುರಳಿ ಚಕ್ರವರ್ತಿ ಅವರು ಮಾಹಿತಿ ನೀಡಿದ್ದು, 'ಸೊಳ್ಳೆಗಳು ನಿಂತ ನೀರಿನಲ್ಲಿ ಉತ್ಪತ್ತಿಯಾಗುತ್ತವೆ. ಆದ್ದರಿಂದ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಮುಖ್ಯವಾಗಿದೆ. ಡೆಂಗ್ಯೂ ಹೆಚ್ಚಿನ ಸಂದರ್ಭಗಳಲ್ಲಿ ಸಂಕೀರ್ಣವಾಗಿದೆ ಎಂದರು.

'ನಿಮ್ಮನ್ನು ರಕ್ಷಿಸಿಕೊಳ್ಳಲು, ನಿಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ ಮತ್ತು ಸಣ್ಣ ಪಾತ್ರೆಗಳಲ್ಲಿ ನೀರನ್ನು ಸಂಗ್ರಹವಾಗಲು ಬಿಡಬೇಡಿ. ಇಲ್ಲಿಯೇ ಡೆಂಗ್ಯೂಗೆ ಕಾರಣವಾಗುವ ಸೊಳ್ಳೆಗಳು ಸಂತಾನೋತ್ಪತ್ತಿ ಮಾಡುತ್ತವೆ.

# ಸಿಡ್ನಿಯಲ್ಲಿ ಭಾರತೀಯ ವಿದ್ಯಾರ್ಥಿಯ ಮೇಲೆ ಹಲ್ಲೆ

■ ವಿಜಯಸಾಕ್ಷಿ ಸುದ್ದಿ, ಸಿಡ್ನಿ

ಸಿಡ್ನಿಯ ಪಶ್ಚಿಮ ಉಪನಗರ ಮೆರ್ರಿಲ್ಯಾಂಡ್ಸ್‌ನಲ್ಲಿ ಶುಕ್ರವಾರ 23 ವರ್ಷದ ಭಾರತೀಯ ವಿದ್ಯಾರ್ಥಿಯನ್ನು ಖಲಿಸ್ತಾನ್ ಬೆಂಬಲಿಗರು ಒದ್ದು, ಥಳಿಸಿ ದೌರ್ಜನ್ಯವೆಸಗಿದ್ದಾರೆ.

ಅಲ್ಲದೇ ಲೋಹದ ರಾಡ್‌ನಿಂದ ವಿದ್ಯಾರ್ಥಿಯನ್ನು ಪದೇ ಪದೆ ಹೊಡೆದಿದ್ದಾರೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ. ಚಾಲಕನಾಗಿ ಕೆಲಸ ಮಾಡುವ ವಿದ್ಯಾರ್ಥಿಯು ಮುಂಜಾನೆ ಕೆಲಸಕ್ಕೆ ಹೋಗುತ್ತಿದ್ದಾಗ, ಬೂದು ಬಣ್ಣದ ಸೆಡಾನ್‌ನಲ್ಲಿ ಬಂದ ನಾಲ್ವರು ವ್ಯಕ್ತಿಗಳು ಆತನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

"ನಾನು ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಳ್ಳಬೇಕು ಎನ್ನುವಷ್ಟರಲ್ಲಿ ಎಲ್ಲಿಂದಲೋ ಬಂದ ಖಲಿಸ್ತಾನ್ ಬೆಂಬಲಿಗರು ನನ್ನ ಮೇಲೆ ದೌರ್ಜನ್ಯ ನಡೆಸಿದರು. ಅವರಲ್ಲಿ ಒಬ್ಬಾತ ನನ್ನ ವಾಹನದ ಎಡಭಾಗದ ಬಾಗಿಲನ್ನು ತೆರೆದು ನನ್ನ ಎಡಗಣ್ಣಿನ ಕೆಳಗೆ ಕೆನ್ನೆಯ ಮೇಲೆ ಕಬ್ಬಿಣದ ರಾಡ್‌ನಿಂದ ಹೊಡೆದ" ಎಂದು ವಿದ್ಯಾರ್ಥಿ ತಿಳಿಸಿದರು. ದಾಳಿಕೋರರ ಪೈಕಿ ಇಬ್ಬರು ತಮ್ಮ ಫೋನ್‌ಗಳಲ್ಲಿ ದಾಳಿಯ ದೃಶ್ಯವನ್ನು ವಿಡಿಯೋ ರೆಕಾರ್ಡ್ ಮಾಡುತ್ತಿದ್ದರೆ, ನಾಲ್ಕೈದು ಜನರು ತನಗೆ ಹೊಡೆಯುತ್ತಿದ್ದರು. ದುಷ್ಕರ್ಮಿಗಳು ನಿರಂತರವಾಗಿ ಖಲಿಸ್ತಾನ್ ಜಿಂದಾಬಾದ್ ಘೋಷಣೆ ಕೂಗುತ್ತಿದ್ದರು ಎಂದು ವಿದ್ಯಾರ್ಥಿ ತಿಳಿಸಿದರು. "ಖಲಿಸ್ತಾನ್ ವಿಷಯವನ್ನು ವಿರೋಧಿಸಿದ್ದಕ್ಕೆ ಇದು ನಿನಗೆ ಪಾಠವಾಗಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಇಂಥ ಮತ್ತಷ್ಟು ಪಾಠ ಕಲಿಸಲಾಗುವುದು ಎಂದು ಬೆದರಿಸಿದರು. ಇದೆಲ್ಲವೂ ಐದು ನಿಮಿಷಗಳಲ್ಲಿ ಮುಗಿದು ಹೋಯಿತು" ಎಂದು ಸಂತ್ರಸ್ತ ವಿದ್ಯಾರ್ಥಿ ಹೇಳಿಕೊಂಡರು. ಘಟನೆಯನ್ನು ನೋಡಿದ ದಾರಿಹೋಕರು ಮಾಹಿತಿ ನೀಡಿದ ನಂತರ ನ್ಯೂ ಸೌತ್ ವೇಲ್ಸ್ (NSW) ಪೊಲೀಸರು ಸ್ಥಳಕ್ಕೆ ವೈದ್ಯರೊಂದಿಗೆ ಆಗಮಿಸಿದರು.

# ದಸರಾಕ್ಕೂ ಮುಂಚೆ ಚಾಮುಂಡಿ ಬೆಟ್ಟ ಪ್ಲಾಸ್ಟಿಕ್ ಮುಕ್ತವಾಗಲಿ

■ ವಿಜಯಸಾಕ್ಷಿ ಸುದ್ದಿ, ಮೈಸೂರು

ಚಾಮುಂಡಿ ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲು ಎಲ್ಲ ಅಗತ್ಯವಾದ ಕ್ರಮಗಳನ್ನು ಕೈಗೊಂಡು, ದಸರಾ ಪ್ರಾರಂಭಕ್ಕೂ ಮುಂಚೆ ಸಂಪೂರ್ಣ ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಮುಖ್ಯಸ್ಥರು ಹಾಗೂ ನ್ಯಾಯಮೂರ್ತಿಗಳಾದ ಸುಭಾಷ್ ಬಿ ಅಡಿ ಅವರು ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಕಸ ವಿಲೇವಾರಿ ಕುರಿತು ಹಮ್ಮಿಕೊಂಡಿದ್ದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಸ ವಿಲೇವಾರಿ ಕುರಿತು ಹಮ್ಮಿಕೊಂಡಿದ್ದ ಅಧಿಕಾರಿಗಳ ಸಭೆ

ಆಂಧ್ರಪ್ರದೇಶಕ್ಕೆ ತಿರುಪತಿ ಹೇಗೆ ಪ್ರಮುಖ, ಅದೇ ರೀತಿ ಕರ್ನಾಟಕಕ್ಕೆ ಚಾಮುಂಡಿಬೆಟ್ಟ



ಅಷ್ಟೇ ಪ್ರಮುಖ. ಪರಿಸರವನ್ನು ಸಂರಕ್ಷಿಸುವಲ್ಲಿ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು. ಚಾಮುಂಡಿ ಬೆಟ್ಟಕ್ಕೆ ಎಂಟ್ರಿಯಾಗುವ ಪ್ರದೇಶದಲ್ಲಿಯೇ ಪ್ಲಾಸ್ಟಿಕ್ ಕೊಂಡೊಯ್ಯದಂತೆ ಪರಿಶೀಲಿಸಬೇಕು. ಪ್ರತಿಯೊಂದು ಸರ್ಕಾರಿ ಕಚೇರಿಗಳಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲ್‌ಗಳ ಬಳಕೆ ನಿಷೇಧಿಸಿ, 20 ಲೀಟರ್ ಕ್ಯಾನ್ ನೀರನ್ನು ಪೇಪರ್ ಕಪ್‌ನಲ್ಲಿ ಬಳಸಬೇಕು ಎಂದು ಸೂಚಿಸಿದರು.

ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ಬೆಟ್ಟ ಮಾಡಲು ಅಲ್ಲಿನ ಗ್ರಾಮ ಪಂಚಾಯಿತಿ ಹಾಗೂ ದೇವಸ್ಥಾನದ ಆಡಳಿತ ಮಂಡಳಿ ಅಂಗಡಿ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಸದಂತೆ ಕ್ರಮವಹಿಸಬೇಕು. ಬಳಸಿದರೆ ದಂಡ ವಿಧಿಸುವ ಕೆಲಸ ಆಗಬೇಕು. ಕಾನೂನು ಪಾಲನೆ ಮಾಡದಿದ್ದರೆ ಲೈಸೆನ್ಸ್ ರದ್ದುಪಡಿಸಿ.


ದೇವಸ್ಥಾನದ ಪ್ರವೇಶದಲ್ಲಿ ಪ್ಲಾಸ್ಟಿಕ್ ತರದಂತೆ ಪರಿಶೀಲಿಸಬೇಕು. ಹೊಟೇಲ್‌ಗಳಲ್ಲಿ ಮತ್ತು ಬೀದಿ ಬದಿ ವ್ಯಾಪಾರಿಗಳು ಏಕ ಬಳಕೆಯ ಪ್ಲಾಸ್ಟಿಕ್ ಬಳಸದಂತೆ ಅರಿವು ಮೂಡಿಸಬೇಕು.

# ಸ್ವತ್ತುಗಳಿಗೆ ಬಿ ಖಾತ ನೀಡುವ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಕೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಬಿ ಖಾತ ನೀಡುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ವಿಧಾನಸಭೆಯಲ್ಲಿ ತಿಳಿಸಿದರು. ಇಂದು ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್ ಶಾಸಕ ಜಿ. ಡಿ ಹರೀಶ್‌ಗೌಡ ಅವರ ಪ್ರಶ್ನೆಗೆ ಪೌರಾಡಳಿತ ಸಚಿವ ರಹಿಂಖಾನ್ ಉತ್ತರಿಸುತ್ತಿದ್ದ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಸಚಿವ ಸುರೇಶ್, ಬೆಂಗಳೂರಿನಲ್ಲಿ ಭೂ ಪರಿವರ್ತನೆಯಾದ ನಿವೇಶನ ಮತ್ತು ಕಟ್ಟಡಗಳಿಗೆ ಎ ಖಾತೆ, ಭೂ ಪರಿವರ್ತನೆಯಾಗದ ಸ್ವತ್ತುಗಳಿಗೆ ಬಿ ಖಾತೆ ನೀಡಲಾಗುತ್ತಿದೆ. ಅದೇ ರೀತಿ ರಾಜ್ಯದ ಎಲ್ಲ ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಿ ಖಾತೆಗೆ ಅವಕಾಶ ಕಲ್ಪಿಸಿದರೆ ಸರ್ಕಾರಕ್ಕೂ ಎರಡು ಸಾವಿರ ಕೋಟಿ ಆದಾಯ ಬರಲಿದೆ ಎಂದರು.

ಈ ಸಂಬಂಧ ಪೌರಾಡಳಿತ ಸಚಿವರ ಜತೆ ಚರ್ಚಿಸಿ ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಖಾತೆ ಬಿಕ್ಕಟ್ಟು ಬಹಳಷ್ಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇರುವುದರಿಂದ ಕುಡಿಯುವ ನೀರು, ರಸ್ತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಿದರೂ ಆದಾಯ ಬರುತ್ತಿಲ್ಲ ಎಂದು ಹೇಳಿದರು.



ಇದಕ್ಕೂ ಮುನ್ನ ಉತ್ತರ ನೀಡಿದ ಪೌರಾಡಳಿತ ಸಚಿವ ರಹಿಂಖಾನ್ ಅವರು, ಹುಣಸೂರು ನಗರಸಭೆ ವ್ಯಾಪ್ತಿಯಲ್ಲಿ 81 ಅನಧಿಕೃತ ಬಡಾವಣೆಗಳು ನಿರ್ಮಾಣಗೊಂಡಿವೆ. ಗ್ರಾಮಾಂತರ, ನಗರ ಯೋಜನಾ ಕಚೇರಿಯಿಂದ ಅನುಮೋದನೆಗೊಂಡ ಬಡಾವಣೆ ಗ್ರಾಮಠಾಣಾ ನಿವೇಶನಗಳಿಗೆ ನಮೂನೆ -3 ಅನ್ನು ನೀಡಲಾಗುತ್ತಿದೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಸೊಸೆಯನ್ನು ಕೊಂದ ಆರೋಪ ಮಾವನ ಬಂಧನ

■ವಿಜಯಸಾಕ್ಷಿ ಸುದ್ದಿ, ಮೈಸೂರು

ಮೈಸೂರು ಜಿಲ್ಲೆಯಲ್ಲಿ ಸೊಸೆಯನ್ನು ಹೊಡೆದು ಕೊಂದ ಆರೋಪದ ಮೇಲೆ 70 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಹಾರೋಹಳ್ಳಿ ಗ್ರಾಮದ ನಿವಾಸಿ ಘಂಟಯ್ಯ, ತನ್ನ ಸೊಸೆ ಉದ್ಯೋಗಕ್ಕಾಗಿ ಮನೆಯಿಂದ ಹೊರಬರುವುದನ್ನು ವಿರೋಧಿಸಿದ್ದರು.

ಪತಿಯ ಆದಾಯ ಸಾಕಾಗದ ಕಾರಣ ಕವಿತಾ (ಸಂತ್ರಸ್ತ ಮಹಿಳೆ) ಖಾಸಗಿ ಕಾಲೇಜಿನಲ್ಲಿ ಅಟೆಂಡರ್ ಆಗಿ ಕೆಲಸಕ್ಕೆ ಸೇರಿದ್ದರು.

ಕಳೆದ 15 ವರ್ಷಗಳ ಹಿಂದೆ ದಂಪತಿ ಮದುವೆಯಾಗಿದ್ದರು. ಘಂಟಯ್ಯನಿಗೆ ಸೊಸೆ ಕವಿತಾ ಕೆಲಸಕ್ಕೆ ಹೋಗುವುದು ಇಷ್ಟವಾಗಿರಲಿಲ್ಲ. ಕೆಲಸ ಮಾಡುವುದನ್ನು ನಿಲ್ಲಿಸುವಂತೆ ಆಗಾಗ್ಗೆ ಜಗಳವಾಡುತ್ತಿದ್ದರು.

# ರೈತಪರ ಯೋಜನೆಗಳನ್ನು ನಿಲ್ಲಿಸುವ ಹುನ್ನಾರ

▶▶ಮೊದಲನೇ ಪುಟದಿಂದ

ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಎಲ್ಲಿ ಬೇಕಾದರೂ ಮಾರಾಟ ಮಾಡಬಹುದಿತ್ತು. ಆದರೆ ಈ ಕಾಯಿದೆಯನ್ನು ರದ್ದು ಮಾಡಿ, ಸೆಸ್ ನೀಡಿ ಕಡಿಮೆ ಬೆಲೆಗೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲೇ ಮಾರಾಟ ಮಾಡಲು ನಿರ್ಬಂಧ ವಿಧಿಸಿದಂತಾಗಿದೆ ಎಂದು ಆರೋಪಿಸಿದರು.

ಅಂತೆಯೇ, ತಾವೇ ವಿದ್ಯುತ್ ಬೆಲೆ ಏರಿಕೆ ಮಾಡಿ, ಬಿಜೆಪಿ ಸರಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ. ರೈತನ ಮಕ್ಕಳಿಗೆ ನೀಡಲಾಗುತ್ತಿದ್ದ ವಿದ್ಯಾನಿಧಿ ಯೋಜನೆಯನ್ನು ನಿಲ್ಲಿಸುವ ಕುರಿತು ಮಾತಾಡಿದ್ದಾರೆ. ಇನ್ನು ಕೃಷಿ ಸಮ್ಮಾನ್ ಯೋಜನೆಯನ್ನೂ ನಿಲ್ಲಿಸುವ ಸೂಚನೆಯಿದೆ. ಜಿಲ್ಲೆಗೊಂದು ಗೋಶಾಲೆ ನೆನಗುದಿಗೆ ಬಿದ್ದಿದೆ ಎಂದು ಆರೋಪಿಸಿದರು.

ಆರ್ ಜಿ ಪಾಟೀಲ, ಶಂಕರ ಕರಿಬಿಷ್ಠಿ, ಶಿವಾನಂದ ನಾಗರಾಳ, ವಿಜಯಕುಮಾರ ಕುರ್ತಕೋಟಿ, ಬಸವರಾಜ ಪೂಜಾರ, ರಮೇಶ ಬಳ್ಳಾರಿ ಮುಂತಾದವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ ಕಾರ್ಯಕ್ರಮ

▶▶ಮೊದಲನೇ ಪುಟದಿಂದ

ಯೋಜನೆಯ ಫಲಾನುಭವಿಗಳಿಗೆ ನೇರ ಹಣ ವರ್ಗಾವಣೆ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಮಧ್ಯಾಹ್ನ 12.30 ಗಂಟೆಗೆ ನಗರದ ಶ್ರೀನಿವಾಸ ಭವನದಲ್ಲಿ ಪತ್ರಿಕಾ ದಿನಾಚರಣೆ ಪ್ರಶಸ್ತಿ ಪ್ರಧಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮ.1.30 ಗಂಟೆಗೆ ನಗರದ ತೋಂಟದಾರ್ಯ ಕಲ್ಯಾಣ ಕೇಂದ್ರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿ ಇವರ ವತಿಯಿಂದ ಪಜಾ/ಪಪಂ.ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 2 ಗಂಟೆಗೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಅಖಿಲ ಭಾರತ 6ನೇ ಸಾಂಸ್ಕೃತಿಕ ಸಮ್ಮೇಳನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 5 ರಿಂದ 7 ರವರೆಗೆ ಗದಗ ಕಾಟನ್ ಸೇಲ ಸೊಸೈಟಿ ಕಾರ್ಯಾಲಯದಲ್ಲಿ ಸಾರ್ವಜನಿಕರೊಂದಿಗೆ ಭೇಟಿ ನಡೆಸುವರು. ರಾತ್ರಿ 9.40 ಗಂಟೆಗೆ ಹುಬ್ಬಳ್ಳಿ ಮೂಲಕ ಬೆಂಗಳೂರಿಗೆ ಪ್ರಯಾಣ ಮಾಡುವರು ಎಂದು ಸಚಿವರ ಕಾರ್ಯಾಲಯದ ಮೂಲಗಳು ತಿಳಿಸಿವೆ.



ಶುಕ್ರವಾರ ನಡೆದ ವಿಧಾನಪರಿಷತ್ತಿನ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭಾಗವಹಿಸಿ ತೆರಳುವ ಸಂದರ್ಭದಲ್ಲಿ ಸಭಾಪತಿ ಬಸವರಾಜ್ ಹೊರಟ್ಟಿ ಅವರ ಕಚೇರಿಗೆ ಸೌಜನ್ಯಯುತ ಭೇಟಿ ನೀಡಿ, ಕುಶಲೋಪರಿ ವಿಚಾರಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸದಸ್ಯರು, ಗಣ್ಯಮಾನ್ಯರು ಸೇರಿದಂತೆ ಸಭಾಪತಿಗಳ ವಿಶೇಷ ಅಧಿಕಾರಿ ಶೈಲಾ ಕೆ ಡಿ, ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ್ ವಾಳ್ವೇಕರ್ ಮುಂತಾದವರು ಉಪಸ್ಥಿತರಿದ್ದರು ಎಂದು ಡಾ. ಬಸವರಾಜ ಧಾರವಾಡ ತಿಳಿಸಿದ್ದಾರೆ.

### ಜಕ್ಕಲಿಯಲ್ಲಿ 4ನೇ ಮಂಗಳವಾರದ ಗುಳ್ಳವ್ವ-ಗೊಗ್ಗಪ್ಪನ ಮೂರ್ತಿಗಳ ಪ್ರತಿಷ್ಠಾಪನೆ

# ಗ್ರಾಮೀಣರ ಜಾನಪದ ಸೊಗಡಿನ ಹಬ್ಬ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಈ ಗುಳ್ಳವ್ವನ ಹಬ್ಬ ಬಂತೆಂದರೆ ಸಾಕು, ನಮ್ಮ ಗ್ರಾಮೀಣ ಮಕ್ಕಳಿಗೆ ಸಡಗರವೋ ಸಡಗರ. ಗುಳ್ಳವ್ವನ ಪೂಜೆ ಮಾಡಬೇಕೆಂದು ಸಮೀಪದ ಜಕ್ಕಲಿ ಗ್ರಾಮದ ಮೆಣಸಗಿಯವರ ಓಣಿಯ ಪುಟ್ಟ ಮಕ್ಕಳು ಸೇರಿಕೊಂಡು, ಊರ ಸಮೀಪದ ಗುಳ್ಳವ್ವನ ಕೆರೆಯಿಂದ ಎರೆ ಮಣ್ಣಿನಿಂದ ಅರಲು ಗುಂಡು ಮಾಡಿಕೊಂಡು ಅಲ್ಲಿಂದ ತಲೆಮೇಲೆ ಹೊತ್ತು ಪಲ್ಲೇದವರ ಮನೆಗೆ ಬರುವಾಗ ಹಾಡು ಹೇಳುತ್ತಾ ಬಂದರು.

ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ ನಂತರ ಬರುವ ಈ ಗುಳ್ಳವ್ವ ಹಾಗೂ ಗೊಗ್ಗಪ್ಪನಿಗೆ ವಿಶಿಷ್ಟ ಪೂಜೆ ಸಲ್ಲಿಸುವ ಮೂಲಕ ಇಲ್ಲಿಯ ಹಿರಿಯರು, ಮಕ್ಕಳು ಸೇರಿದಂತೆ ನಾಲ್ಕನೆ ಮಂಗಳವಾರದ ವಿಶಿಷ್ಟ ಗುಳ್ಳವ್ವನ ಹಬ್ಬವನ್ನು ಆಚರಣೆ ಮಾಡಿ ಖುಷಿ ಪಡುತ್ತಾರೆ.

ಅಂತೆಯೇ, ಗುಳ್ಳವ್ವನ ಗಂಡ ಗೊಗ್ಗಪ್ಪನಿಗೆ ಉಡುಗೆ ತೊಡಿಸಿ ಕೊರಳಿಗೆ ಒಂದು ಹೂವಿನ ಮಾಲೆ ಹಾಕಿ ಮೆಣಸಗಿಯವರ ಓಣಿಯ ಪಲ್ಲೇದವರ ಮನೆ ಬಂಕದ ಕಟ್ಟೆಯ ಮೇಲೆ ಗುಳ್ಳವ್ವ ಮತ್ತು ಗೊಗ್ಗಪ್ಪನ ಮೂರ್ತಿಗಳನ್ನು ಅಲಂಕರಿಸಿ ಪ್ರತಿಷ್ಠಾಪನೆ ಮಾಡಿದರು. ಮೂರ್ತಿಗಳ ಮುಂದೆ ಮಕ್ಕಳೆಲ್ಲರೂ ಜಾತಿ-ಮತ ಬೇಧವಿಲ್ಲದೆ ಒಟ್ಟಾಗಿ ಕುಳಿತು ತಮ್ಮ ತಮ್ಮ ಮನೆಗಳಿಂದ ತಂದಿದ್ದ ದೋಸೆ, ಚೊಂಚಲಾ ಹಾಗೂ ನಾನಾ ತರಹದ ಸಿಹಿ ಅಡುಗೆಗಳ ಸಹಪಂಕ್ತಿ ಭೋಜನವನ್ನು ಸವಿದರು.



ಮೊದಲನೇ ವಾರ ಒಂದು ಬಾಗಿಲಿನ ನಾಲ್ಕು ಕಂಬಗಳ ಮನೆ, ಎರಡನೇ ವಾರ ಎರಡು ಬಾಗಿಲಿನ ಎಂಟು ಕಂಬಗಳ ಮನೆ, ಮೂರನೇ ವಾರ ಮೂರು ಬಾಗಿಲಿನ ಹನ್ನೆರಡು ಕಂಬಗಳ ಮನೆ ಹೀಗೆ ಕಂಬಗಳನ್ನು ಏರಿಸುತ್ತಾ ಮನೆ ನಿರ್ಮಿಸಿ, ಮನೆ ಬಾಗಿಲಿಗೆ ಎತ್ತು ಮಾಡಿ ಕೂರಿಸುತ್ತಾರೆ. ಪ್ರತಿ ವಾರ ಪ್ರತಿಷ್ಠಾಪಿಸಿದ್ದ ಮೂರ್ತಿಗಳನ್ನು ಬುಧವಾರ ಹೊತ್ತು ಮುಳುಗುವುದರೊಳಗೆ ಮಕ್ಕಳೆಲ್ಲರೂ ಅಗಸರ ಹಳ್ಳದಲ್ಲಿರಿಸಿ ಪೂಜೆ ನೆರವೇರಿಸಿ ಬಳಿಕ ಅಲ್ಲಿ ದಫನ್ ಮಾಡಲಾಗುತ್ತದೆ ಎಂದು ಶಾಂತಮ್ಮ ಮೆಣಸಗಿ ವಿವರಿಸಿದರು.

ಈ ಸಂದರ್ಭದಲ್ಲಿ ನಂದಾ ಮೆಣಸಗಿ, ಶರಣಮ್ಮ ನರೇಗಲ್ಲ, ಶಾರದಾ ಬುಳ್ಳಾ, ಬಸವಣ್ಣೆಮ್ಮ ನರೇಗಲ್ಲ, ಸಾವಿತ್ರಿ ವಾಲಿ, ವಿದ್ಯಾ ನರೇಗಲ್ಲ, ವಿಜಯಲಕ್ಷ್ಮೀ ಪಲ್ಲೇದ, ಶಿಲ್ಪಾ ಮೆಣಸಗಿ, ಗೀತಾ ಮಂಗಳಗುಡ್ಡ, ಭೀಮವ್ವ ಕರೇಕುಲದ, ಶ್ರೀದೇವಿ ಹೂಗಾರ, ಕೀರ್ತಿ ಮೆಣಸಗಿ, ಭಾಗ್ಯ ಆದಿ, ಮಕ್ಕಳಾದ ಕೃತಿಕಾ, ಅಪೇಕ್ಷಾ, ಸರಸ್ವತಿ, ಶಿವರಾಜ್, ವಿನಯ್, ವಿಜಯ, ಶರತ್, ನಂದೀನಿ, ರೇಖಾ, ರೋಹಿಣಿ, ಶೀವು, ಹರ್ಷಾ, ಚಿನ್ನಿ, ಪಲ್ಲವಿ, ಶಶಾಂಕ್, ಸಾನ್ವಿ, ಸಾತ್ವಿಕ್, ನವೀನ್, ಅರ್ಜುನ್ ಭಾಗವಹಿಸಿದ್ದರು.

> ಆಧುನಿಕ ಯುಗದಲ್ಲಿ ಇಂತಹ ಹಬ್ಬ-ಹರಿದಿನಗಳ ಆಚರಣೆ ಬಗ್ಗೆ ನಿರ್ಲಕ್ಷ್ಯ ಹೊಂದಿರುವ ಇಂದಿನ ಯುವ ಪೀಳಿಗೆಗೆ ತಿಳಿಸುವುದು ಹಿರಿಯರ ಕರ್ತವ್ಯ. ಇಂದಿಗೂ ಅವುಗಳನ್ನು ಆಚರಣೆಗಳ ಮೂಲಕ ಜನರಲ್ಲಿ ಹಬ್ಬಗಳ ವೈಶಿಷ್ಟ್ಯತೆ ಹಾಗೂ ಸರಳತೆಯ ಜಾನಪದ ಸಾಹಿತ್ಯದ ಸದಭಿರುಚಿ ಉಣಬಡಿಸುವ ಕಾಯಕ ನಮ್ಮದಾಗಿದೆ.
>
> – ಮುನಿಯಪ್ಪ ಪಲ್ಲೇದ. ಗ್ರಾಮದ ಹಿರಿಯ ರೈತರು.

ಪ್ರತಿ ವರ್ಷದ ಸಂಪ್ರದಾಯದಂತೆ ಆಷಾಢ ಮಾಸದ ಮಣ್ಣೆತ್ತಿನ ಅಮವಾಸ್ಯೆಯಿಂದ ನಾಗರ ಅಮವಾಸ್ಯೆಯವರೆಗೆ ಬರುವ ಪ್ರತಿ ಮಂಗಳವಾರ ತಂದಿದ್ದ ಅರಲನ್ನು ಹದ ಮಾಡಿಕೊಂಡು ಗುಳ್ಳವ್ವ ಮತ್ತು ಗೊಗ್ಗಪ್ಪನ ಮೂರ್ತಿಗಳನ್ನು ತಯಾರಿಸುತ್ತಾರೆ. ಗುಳ್ಳವ್ವನಿಗೆ ಗುಲಗಂಜಿ, ಜೋಳ, ಕುಸಬಿ ಚುಚ್ಚಿ ಅರಿಷಿಣ, ಕುಂಕುಮ, ವಿಭೂತಿ ಲೇಪಿಸುತ್ತಾರೆ. ಬಳಿಕ ಸೀರೆ, ರವಿಕೆ ತೊಡಿಸಿ, ನಡುಪಟ್ಟಿ, ಕಿವಿಯೋಲೆ, ಮೂಗುಬೊಟ್ಟು, ಬೆಂಡವಾಲೆ, ಕೊರಳು ದಾಗಿನ, ಜಡೆಗೆ ಹೂ ಮುಡಿಸಿ ಸಿಂಗರಿಸುತ್ತಾರೆ.

# ರೈತ ಬಾಂಧವರಿಗೆ ಇ- ಕೆವೈಸಿ ಕಡ್ಡಾಯ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟು 220 ಮಿ.ಮೀ. ವಾಡಿಕೆಗೆ ಕೇವಲ 141 ಮಿ.ಮೀ.ಮಳೆಯಾಗಿದ್ದು, ಶೇ.36 ರಷ್ಟು ಕೊರತೆಯಾಗಿರುತ್ತದೆ. ಪೂರ್ವ ಮುಂಗಾರಿನಲ್ಲಿ 104 ಮಿ.ಮೀ.ವಾಡಿಕೆಗೆ 64 ಮಿ.ಮೀ. ಮಳೆಯಾಗಿದ್ದು, ಶೇ.38ರಷ್ಟು ಕೊರತೆಯಾಗಿರುತ್ತದೆ ಹಾಗೂ ಮುಂಗಾರಿನಲ್ಲಿ 114 ಮಿ.ಮೀ. ವಾಡಿಕೆಗೆ ಕೇವಲ 77 ಮಿ.ಮೀ. ಮಳೆಯಾಗಿದ್ದು, ಶೇ. 33 ರಷ್ಟು ಕೊರತೆಯಾಗಿರುತ್ತದೆ.

ಪ್ರಸಕ್ತ ಮುಂಗಾರು ಹಂಗಾಮಿಗೆ ಒಟ್ಟು 309810 ಹೆಕ್ಟೇರ್ ವಿವಿಧ ಕೃಷಿ ಬೆಳೆಗಳ ಬಿತ್ತನೆಯ ಗುರಿ ಹೊಂದಲಾಗಿದ್ದು, ಇಲ್ಲಿಯವರೆಗೆ 89105 (ಶೇ. 28.76) ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿರುತ್ತದೆ. ಪ್ರಮುಖವಾಗಿ 105000 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳದ ಗುರಿ ಹೊಂದಿದ್ದು, ಕೇವಲ 43572 ಹೆಕ್ಟೇರ್ (ಶೇ. 41.5) ಪ್ರದೇಶದಲ್ಲಿ, 125000 ಹೆಕ್ಟೇರ್ ಪ್ರದೇಶದಲ್ಲಿ ಹೆಸರು ಬೆಳೆ ಬಿತ್ತನೆಗುರಿ ಹೊಂದಲಾಗಿದ್ದು, ಕೇವಲ 22032 ಹೆಕ್ಟೇರ್ (ಶೇ. 17.63) ಪ್ರದೇಶದಲ್ಲಿ, 32560 ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬಿತ್ತನೆ ಗುರಿ ಹೊಂದಿದ್ದು, 10558 ಹೆಕ್ಟೇರ್ (ಶೇ. 32.43) ಪ್ರದೇಶದಲ್ಲಿ, 11300 ಹೆಕ್ಟೇರ್ ಪ್ರದೇಶದಲ್ಲಿ ಸೂರ್ಯಕಾಂತಿ ಬಿತ್ತನೆ ಗುರಿ ಇದ್ದು, 6275 ಹೆಕ್ಟೇರ್ ಪ್ರದೇಶದಲ್ಲಿ (ಶೇ. 55.53) ಮತ್ತು 24000 ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆ ಗುರಿ ಹೊಂದಿದ್ದು, ಕೇವಲ 2928 ಹೆಕ್ಟೇರ್ (ಶೇ. 12.20) ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿರುತ್ತದೆ.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಇಲ್ಲಿಯವರೆಗೆ ಸರಾಸರಿ ಶೇ. 80.06 ರಷ್ಟುಇ-ಕೆವೈಸಿ ಪ್ರಗತಿ ಸಾಧಿಸಲಾಗಿದೆ. ಆದರೆ ರಾಜ್ಯದ ಸರಾಸರಿ ಶೇ. 80 ಕ್ಕಿಂತ ಜಾಸ್ತಿ ಇದ್ದು, ಜಿಲ್ಲೆಯ ಪ್ರಗತಿ ರಾಜ್ಯದ ಸರಾಸರಿಗಿಂತ ಕಡಿಮೆಯಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 26922 ಫಲಾನುಭವಿಗಳು ಇ-ಕೆವೈಸಿ ಮಾಡಿಸಲು ಬಾಕಿ ಇರುತ್ತದೆ. ಇ-ಕೆವೈಸಿ ಕಡ್ಡಾಯವಾಗಿ ಮಾಡಲು ಎಲ್ಲ ರೈತ ಬಾಂಧವರಲ್ಲಿ ತಿಳಿಸಲಾಗಿದೆ.

ಮುಂಗಾರು ಬೆಳೆ ಸಮೀಕ್ಷೆ ಅಡಿಯಲ್ಲಿ ಜಿಲ್ಲೆಯಲ್ಲಿ 325105 ತಾಕುಗಳು ಹೊಂದಿದ್ದು, ಈವರೆಗೆ ರೈತರಿಂದ ಹಾಗೂ ಖಾಸಗಿ ನಿವಾಸಿಗಳಿಂದ ಕೇವಲ 20790 ತಾಕುಗಳು ಮಾತ್ರ ಬೆಳೆ ಸಮೀಕ್ಷೆಗೆ ಒಳಪಟ್ಟಿದೆ. (ಶೇ.6.39) ಬಾಕಿ ಇರುವ 304315 ತಾಕುಗಳನ್ನುರೈತರು ತಾವೇ ಖುದ್ದಾಗಿ ಅಥವಾ ಗ್ರಾಮದ ಖಾಸಗಿ ನಿವಾಸಿಗಳ ಮುಖಾಂತರ ಬೆಳೆ ಸಮೀಕ್ಷೆ ಕೈಗೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರತಿಬಂಧಕಾಜ್ಞೆ ಜಾರಿ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಆದರ್ಶ ವಿದ್ಯಾಲಯಗಳಿಗೆ 7, 8 ಮತ್ತು 9ನೇ ತರಗತಿ ದಾಖಲಾತಿಗಾಗಿ ನಡೆಯುವ ಪ್ರವೇಶ ಪರೀಕ್ಷೆಗಳು ರೋಣ ಮತ್ತು ಮುಂಡರಗಿ ತಾಲೂಕಿನಲ್ಲಿ ಜುಲೈ 15 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಜರುಗಲಿವೆ.

ಸದರಿ ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಸಲುವಾಗಿ ಜಿಲ್ಲೆಯ 2 ಪರೀಕ್ಷಾ ಕೇಂದ್ರಗಳಲ್ಲಿ ಜುಲೈ 15 ರಂದು ಬೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು ಅಥವಾ ವ್ಯಕ್ತಿಗಳ ಗುಂಪುಗಳಲ್ಲಿ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ , ಬುಕ್ ಸ್ಟಾಲ್ , ಸೈಬರ್ ಕೆಫೆ , ಫೋಟೊ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ.

# ನಗರಸಭೆಯಿಂದ ನಿಷೇಧಿತ ಏಕ ಬಳಕೆಯ ಪ್ಲಾಸ್ಟಿಕ್ ಜಪ್ತಿ

▶▶ಮೊದಲನೇ ಪುಟದಿಂದ

ಕಳುಹಿಸಿದರು. ನಿಷೇಧಿತ ಪ್ಲಾಸ್ಟಿಕ್ ಮಾರಾಟಗಾರರಿಗೆ 3500 ರೂ ದಂಡ ವಿಧಿಸಿದರು. ಈ ದಾಳಿಯಲ್ಲಿ ನಗರಸಭೆಯ ಪರಿಸರ ಅಭಿಯಂತರ ಆನಂದ ಬದಿ, ಹಿರಿಯ ಆರೋಗ್ಯ ನಿರೀಕ್ಷಕ ಎಂ ಎಂ ಮಕಾನದಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಹಾಗೂ ನಗರಸಭೆಯ ಸಿಬ್ಬಂದಿಗಳಾದ ಸಿ ಆರ್ ಹಾದಿಮನಿ, ಸಣ್ಣಪ್ಪ ಬೋಳಮ್ಮನವರ, ಹೇಮೇಶ ಯಟ್ಟಿ, ಕೆಂಚಪ್ಪ ಪೂಜಾರ, ದ್ಯಾಮಣ್ಣ ರಾಮಗಿರಿ, ಪರಶುರಾಮ ಪೂಜಾರ, ಅರ್ಜುನ ದೊಡ್ಡಮನಿ ಪಾಲ್ಗೊಂಡಿದ್ದರು.

# ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸಿ

▶▶ಮೊದಲನೇ ಪುಟದಿಂದ

ನಿಲುಗಡೆಗಳಲ್ಲಿ ಕಡ್ಡಾಯವಾಗಿ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ, ಹತ್ತಿಸಿಕೊಂಡು ಹೋಗುವಂತೆ, ಪ್ರಯಾಣಿಕರೊಂದಿಗೆ ಸೌಜನ್ಯತೆಯಿಂದ ವರ್ತಿಸುವಂತೆ ಹಾಗೂ ಸುರಕ್ಷಿತ ಕ್ರಮಗಳ ಪಾಲನೆಯ ಬಗ್ಗೆ ಚಾಲನಾ ಸಿಬ್ಬಂದಿಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಉತ್ತಮ ಸಾಧನೆ ಮಾಡಿದ ತನಿಖಾ ಸಿಬ್ಬಂದಿಗಳಾದ ಬಸವಂತಪ್ಪ ತಳ್ಳಳ್ಳಿ, ಈಶಪ್ಪ ಪಟ್ಟಣಶೆಟ್ಟಿ, ಭೀಮಪ್ಪ ದಾನಪ್ಪಗೋಳ, ಅಮರನಾಥ ಕುಂಟೋಜಿ, ರಾಜೇಶ್ ಮನಸೂರ ಹಾಗೂ ಗೋವಿಂದ ಲಮಾಣಿ ಹಾಗೂ ಚಾಲಕರಾದ ಹುಸೇನ್‌ಸಾಬ್ ಮುಲ್ಲಾನವರ ಮತ್ತು ಅಶೋಕ ಶಿವಶರಣ ಅವರಿಗೆ ನಗದು ಪುರಸ್ಕಾರ ಹಾಗೂ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

ವಾಕರಸಾ. ಸಂಸ್ಥೆಯ ವ್ಯಾಪ್ತಿಯ ಧಾರವಾಡ, ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ ಹಾಗೂ ಉತ್ತರಕನ್ನಡ ಜಿಲ್ಲೆಗಳ 9 ಸಾರಿಗೆ ವಿಭಾಗಗಳು ಹಾಗೂ ಕೇಂದ್ರ ಕಚೇರಿಯ ತನಿಖಾ ಸಿಬ್ಬಂದಿಗಳು ಜನವರಿಯಿಂದ ಜೂನ್ ಅವಧಿಯಲ್ಲಿ 1,00,778 ತನಿಖೆಗಳನ್ನು ಮಾಡಿದ್ದು, 21,034 ಟಿಕೆಟ್ ಟಿಕೆಟ್ ರಹಿತ ಪ್ರಯಾಣಿಕರಿಂದ ರೂ.20,19,459 ದಂಡ ವಸೂಲು ಮಾಡಲಾಗಿದೆ.

ಮಹಿಳೆಯರಿಗೆ ಬಸ್ಸುಗಳಲ್ಲಿ ಪ್ರಯಾಣ ಉಚಿತವಾಗಿದೆ, ಆದರೆ ಟಿಕೆಟ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದರೆ ಸ್ಥಳದಲ್ಲಿಯೆ ದಂಡ ನೀಡಬೇಕಾಗುತ್ತದೆ.

ಪ್ರತಿಯೊಬ್ಬರೂ ತಪ್ಪದೇ ಪ್ರಯಾಣದ ಅಧಿಕೃತ ಟಿಕೆಟ್ ಪಡೆದು ಪ್ರಯಾಣ ಮಾಡಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಪಾಳು ಬಿದ್ದಿರುವ ವಕಾರ ಸಾಲು ಮಳಿಗೆಗಳನ್ನು ಅಭಿವೃದ್ಧಿಪಡಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹೃದಯ ಭಾಗವಾಗಿರುವ ವಕಾರ ಸಾಲಿನಲ್ಲಿ ಮಳಿಗೆಗಳನ್ನು ನಿರ್ಮಿಸಿ, ಅಭಿವೃದ್ಧಿಪಡಿಸಿ ಬಡವರಿಗೆ ಕಡಿಮೆ ದರದಲ್ಲಿ ಬಾಡಿಗೆಗೆ ನೀಡಿ, ದುಡಿಮೆಗೆ ಅವಕಾಶ ಮಾಡಿಕೊಡಬೇಕೆಂದು ಕ್ರಾಂತಿ ಸೇನಾ ಸಂಘಟನೆಯ ಜಿಲ್ಲಾಧ್ಯಕ್ಷ ಬಾಬು ಬಾಕಳೆ ಸಚಿವ ಡಾ. ಎಚ್ ಕೆ ಪಾಟೀಲರಿಗೆ ಹಾಗೂ ನಗರಸಭೆಗೆ ಪತ್ರಿಕಾ ಪ್ರಕಟಣೆಯ ಮೂಲಕ ಮನವಿ ಮಾಡಿದ್ದಾರೆ.

ವಕಾರ ಸಾಲು ಪಾಳುಬಿದ್ದು ನಾಲ್ಕು ವರ್ಷಗಳೇ ಕಳೆದು ಹೋಗಿವೆ. ದೊಡ್ಡ ಪ್ರಮಾಣದಲ್ಲಿ ಜಾಗ ನಿರುಪಯುಕ್ತವಾಗುತ್ತಿದೆ. ಈ ಜಾಗದಲ್ಲಿ ನಗರಸಭೆಯಿಂದ ಹಂತ ಹಂತವಾಗಿ ಮಳಿಗೆಯನ್ನು ನಿರ್ಮಿಸಿ ಕಡಿಮೆ ದರದಲ್ಲಿ ಬಾಡಿಗೆ ಕೊಟ್ಟರೆ ಸಾಕಷ್ಟು ಬಡ ಕುಟುಂಬಗಳು ದುಡಿದು ತಿನ್ನುವುದಕ್ಕೆ ಆಧಾರವಾಗುತ್ತದೆ. ಆದ್ದರಿಂದ, ಸಚಿವರಾದ ಡಾ. ಎಚ್ ಕೆ ಪಾಟೀಲರು ನಗರಸಭೆ ಅಧ್ಯಕ್ಷರೊಂದಿಗೆ ಹಾಗೂ ಅಧಿಕಾರಿಗಳ ಜೊತೆ ಚರ್ಚೆ ನಡೆಸಿ, ಯೋಜನೆ ರೂಪಿಸಬೇಕು ಎಂದು ಅವರು ವಿನಂತಿಸಿದ್ದಾರೆ.



# ವಿಶ್ವ ಕುಬ್ಜ ಕ್ರೀಡಾಕೂಟಕ್ಕೆ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕಾಡನಕೊಪ್ಪ ಗ್ರಾಮದ ಕುಬ್ಜ ಅಥ್ಲೀಟ್ ದೇವಪ್ಪ ಮೋರೆ(50) 2023ರಲ್ಲಿ ನಡೆಯಲಿರುವ 8ನೇ ವಿಶ್ವ ಕುಬ್ಜ ಕ್ರೀಡಾಕೂಟದಲ್ಲಿ ಸತತ ಮೂರನೇ ಬಾರಿಗೆ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ದೇವಪ್ಪ ಮೋರೆ ಈಗಾಗಲೇ ಯುಎಸ್‌ಎ ಮತ್ತು ಕೆನಡಾದಲ್ಲಿ ನಡೆದ ಎರಡು ವಿಶ್ವ ಕುಬ್ಜ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕಗಳನ್ನು ಗೆದ್ದಿದ್ದಾರೆ. ಈ ವರ್ಷ ಜುಲೈ 28ರಿಂದ ಆಗಸ್ಟ್ 5ರವರೆಗೆ ಜರ್ಮನಿಯ ಕಲೋನ್‌ನಲ್ಲಿ ಕುಬ್ಜರ ವಿಶ್ವ ಕ್ರೀಡಾಕೂಟ ನಡೆಯಲಿದೆ. ಭಾರತವನ್ನು ಪ್ರತಿನಿಧಿಸುವ 19 ಸದಸ್ಯರ ತಂಡದಲ್ಲಿ ದೇವಪ್ಪ ಮೋರೆ ಒಬ್ಬರಾಗಿದ್ದಾರೆ.

ಆಯ್ಕೆಯ ಕುರಿತು ಮಾತನಾಡಿದ ದೇವಪ್ಪ ಮೋರೆ, ವಿಶ್ವ ಕುಬ್ಜ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಲು ನನಗೆ ಹೆಮ್ಮೆ ಎನಿಸುತ್ತದೆ. ಈ ಬಾರಿ ಖರ್ಚುಗಳನ್ನು ಭರಿಸಲು ನನಗೆ ತುಂಬಾ ಕಷ್ಟವಾಗುತ್ತಿದೆ. ನೋಂದಣಿ ಮತ್ತು ಇತರ ಉದ್ದೇಶಗಳಿಗಾಗಿ 1.5 ಲಕ್ಷ ರೂ.ಗಳನ್ನು ಸಂಗ್ರಹಿಸಲಾಗಿದೆ. ನನಗೆ ಇನ್ನೂ ಒಂದು ಲಕ್ಷ ರೂಪಾಯಿಗಳು ಬೇಕು. ಹೊಲದಲ್ಲಿ ಕೆಲಸ ಮಾಡುವುದರ ಜೊತೆಗೆ, ನಾನು ಬೆಳಿಗ್ಗೆ ಮತ್ತು ಸಂಜೆ ಆಟಗಳಿಗಾಗಿ ಅಭ್ಯಾಸ ಮಾಡುತ್ತಿದ್ದೇನೆ ಎಂದಿದ್ದಾರೆ.

### ಜಿಲ್ಲೆಯಲ್ಲಿ ಜುಲೈ 17ರಿಂದ ಆಗಸ್ಟ್ 02ರವರೆಗೆ ಆಂದೋಲನ

# ಸಕ್ರಿಯ ಕ್ಷಯ ಪತ್ತೆಗೆ ಮನೆಗಳ ಸರ್ವೆ



ಕ್ಷಯವು ಮೈಕ್ರೋ ಬ್ಯಾಕ್ಟೀರಿಯಾದಿಂದ ಹರಡುವ ಸಾಂಕ್ರಾಮಿಕ ರೋಗವಾಗಿದ್ದು, ಸೋಂಕಿತ ವ್ಯಕ್ತಿ ಸೀನಿದಾಗ-ಕೆಮ್ಮಿದಾಗ ಗಾಳಿಯ ಮೂಲಕ ತುಂತುರು ಹನಿಯಾಗಿ ಹರಡುತ್ತದೆ. ಚಿಕಿತ್ಸೆ ಪಡೆಯದ ಒಬ್ಬ ವ್ಯಕ್ತಿ ಒಂದು ವರ್ಷದಲ್ಲಿ 10 ಅಥವಾ ಅದಕ್ಕಿಂತ ಹೆಚ್ಚಿನ ಜನರಿಗೆ ರೋಗವನ್ನು ಹರಡಬಲ್ಲ. ಎರಡು ವಾರ ಅಥವಾ ಅದಕ್ಕಿಂತ ಹೆಚ್ಚು ಅವಧಿಯಿಂದ ಕೆಮ್ಮುತ್ತಿರುವ, ಕಫದೊಂದಿಗೆ ರಕ್ತ ಬೀಳುತ್ತಿರುವ, ರಾತ್ರಿ ವೇಳೆ ಜ್ವರ ಬರುವ, ಬೆವರುವ, ಹಸಿವಾಗದಿರುವ ಮತ್ತು ದಿಢೀರ್ ತೂಕ ಇಳಿಕೆಯಾಗಿರುವ ಲಕ್ಷಣ ಹೊಂದಿರುವವರನ್ನು ಗುರುತಿಸಿ ಅವರಿಂದ ಕಫದ ಸ್ಯಾಂಪಲ್ ಸಂಗ್ರಹಿಸುವ ಕೆಲಸವನ್ನು ಮನೆಮನೆ ಸರ್ವೆ ಸಂದರ್ಭದಲ್ಲಿ ಮಾಡಲಾಗುತ್ತಿದೆ.

■ವಿಜಯಸಾಕ್ಷಿ ಸುದ್ದಿ, ಗದಗ

ಕ್ಷಯ ರೋಗಿಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಗೆ ಒಳಪಡಿಸುವ ಉದ್ದೇಶದಿಂದ, ರೋಗ ಹೆಚ್ಚು ವರದಿಯಾಗುತ್ತಿರುವ ಮತ್ತು ಪ್ರಕರಣಗಳೇ ಕಂಡುಬಾರದಿರುವ ಆಯ್ದ ಪ್ರದೇಶಗಳನ್ನು ಪಟ್ಟಿಮಾಡುವ 'ಸಕ್ರಿಯ ಕ್ಷಯರೋಗ ಪತ್ತೆ 1ನೇ ಸುತ್ತಿನ ಆಂದೋಲನ' ಜುಲೈ 17ರಿಂದ ಆಗಸ್ಟ್ 2ರವರೆಗೆ ಜಿಲ್ಲೆಯಲ್ಲಿ ಆರಂಭವಾಗಲಿದೆ. ವಿಶೇಷವಾಗಿ ಅಲೆಮಾರಿ ಜನಾಂಗ/ಕೊಳಚೆ ಪ್ರದೇಶ/ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳು, ಸಕ್ಕರೆ ಖಾಯಿಲೆಯಿಂದ ಬಳಲುತ್ತಿರುವವರು, ಟಿಬಿ ರೋಗಿಗಳಿರುವ ಪ್ರದೇಶ, ಕಾರ್ಮಿಕ ವರ್ಗದ ಜನಸಂಖ್ಯೆಯನ್ನು ಗುರಿಯಾಗಿಸಿಕೊಂಡು ಈ ಆಂದೋಲನವನ್ನು ಹಮ್ಮಿಕೊಳ್ಳಲಾಗುತ್ತಿದೆ.

ರೋಗಿಗಳನ್ನು ವೇಗವಾಗಿ ಗುರುತಿಸಲು 2.41 ಲಕ್ಷ ಜನಸಂಖ್ಯೆಯನ್ನು ಗುರಿಯಾಗಿಸಿಕೊಂಡು 48,372 ಮನೆಗಳಲ್ಲಿ ರೋಗ ಪತ್ತೆಗೆ 1ನೇ ಸರ್ವೆ ನಡೆಸಲಾಗುತ್ತಿದೆ. ಕಳೆದ ವರ್ಷ ಸರ್ವೆ ಸಂದರ್ಭದಲ್ಲಿ 72 ಕ್ಷಯರೋಗಿಗಳು ಹೊಸದಾಗಿ ಪತ್ತೆಯಾಗಿದ್ದು, ಆಗ 2.38 ಜನಸಂಖ್ಯೆ ಪ್ರದೇಶದಲ್ಲಿ ಸರ್ವೆ ನಡೆದಿತ್ತು. ಜಿಲ್ಲೆಯ 11.65 ಲಕ್ಷಕ್ಕೂ ಹೆಚ್ಚು ಜನರ ಸರ್ವೆಯನ್ನು ಹಂತ ಹಂತವಾಗಿ ಆದ್ಯತೆಯ ಮೇಲೆ ಮಾಡಲಾಗುತ್ತಿದೆ. ರಾಷ್ಟ್ರೀಯ ಕ್ಷಯರೋಗ ನಿರ್ಮೂಲನೆ ಅಡಿಯಲ್ಲಿ 2025ಕ್ಕೆ ದೇಶವನ್ನು ಕ್ಷಯರೋಗ ಮುಕ್ತ ಮಾಡುವುದು ಭಾರತ ಸರ್ಕಾರದ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸುರಕ್ಷಣಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರು ಒಂದು ತಂಡವಾಗಿ ಮನೆಮನೆ ಸರ್ವೆ ಮಾಡುತ್ತಿದ್ದು, ನಿತ್ಯ ಇವರು 50 ಮನೆಗಳ ಸರ್ವೆ ಮಾಡಬೇಕಿದೆ. ಇದಕ್ಕಾಗಿ ಪ್ರತಿ ಆಶಾ ಕಾರ್ಯಕರ್ತೆಯರಿಗೆ ದಿನಕ್ಕೆ ರೂ. 100 ಗೌರವ ಸಂಭಾವನೆ ಮತ್ತು ಒಬ್ಬ ಕ್ಷಯರೋಗಿ ಪತ್ತೆಯಾದರೆ ತಂಡಕ್ಕೆ ರೂ.500 ಸಂಭಾವನೆ ನೀಡಲಾಗುತ್ತಿದೆ.

ಖಾಲಿ ಹೊಟ್ಟೆಯಲ್ಲಿ ಮತ್ತು ತಿಂಡಿಯ ನಂತರ 2 ಬಾರಿ ಕಫ ಸ್ಯಾಂಪಲ್ ತೆಗೆದುಕೊಳ್ಳಲಾಗುತ್ತಿದೆ. ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ಕಫ ಪರೀಕ್ಷೆ ಮಾಡಿಸಲಾಗುತ್ತಿದೆ. ಕ್ಷಯ ಪತ್ತೆಯಾದರೆ ಉಚಿತ ಔಷಧ ನೀಡಿ ರೋಗ ಗುಣಪಡಿಸಲಾಗುತ್ತದೆ.

ನಗರದ ಜಿಲ್ಲಾ ಆಸ್ಪತ್ರೆ ಬಳಿ ಜಿಲ್ಲಾ ಕ್ಷಯರೋಗ ಕೇಂದ್ರ ಮತ್ತು ಆಯಾ ತಾಲೂಕಿನಲ್ಲಿ ಕ್ಷಯರೋಗ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ರೋಗಿಗಳಿಗೆ ಔಷಧ ಒದಗಿಸುವ ಮತ್ತು ಸ್ಥಿತಿ ಗಂಭೀರವಾಗಿದ್ದರೆ ಜಿಲ್ಲಾ ಆಸ್ಪತ್ರೆ ಗದಗಿಗೆ ಕಳುಹಿಸುವ ಕೆಲಸ ಮಾಡುತ್ತಿವೆ. ಆಶಾ ಅಥವಾ ಆರೋಗ್ಯ ಕಾರ್ಯಕರ್ತರು ಕ್ಷಯ ಪತ್ತೆಯಾದ ರೋಗಿಯ ಮೇಲ್ವಿಚಾರಣೆ ಮಾಡುತ್ತಾರೆ. ರೋಗ ಇದ್ದರೂ ಅದರ ಅರಿವೇ ಬಹಳ ಜನರಿಗೆ ಇರುವುದಿಲ್ಲ. ಅಂತವರನ್ನು ಪತ್ತೆ ಹಚ್ಚುವುದು ಈ ಸರ್ವೆ ಉದ್ದೇಶವಾಗಿದೆ ಎಂದು ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕೆ ಮಾಹಿತಿ ನೀಡಿದ್ದಾರೆ.


**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ನರಗುಂದ**

ಸಂಖ್ಯೆ:ಇ3/ವಾಹನ ಬಾಡಿಗೆ/2023-24 ದಿನಾಂಕ : 12/07/2023

**ಟೆಂಡರ್ ಪ್ರಕಟಣೆ**

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ನರಗುಂದ ಈ ಕಛೇರಿಯ ದೈನಂದಿನ ಪ್ರಾಥಮಿಕ ಶಾಲೆಗಳ ಸಂದರ್ಶನ, ತಪಾಸಣೆ, ಪರೀಕ್ಷಾ ಕಾರ್ಯ ಹಾಗೂ ಇನ್ನಿತರ ಕಾರ್ಯಗಳಿಗೆ (SWIFT) ಅಥವಾ ಸಮನಾದ ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಹೊರಗುತ್ತಿಗೆ ಮೂಲಕ ಒದಗಿಸಲು ಅರ್ಹ ವಾಹನ ಮಾಲಿಕರಿಗೆ ಕೆಟಿಟಿಪಿ ನಿಯಮಾನುಸಾರ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಮುಚ್ಚಿದ ಲಕೋಟೆಯಲ್ಲಿ ಮೊಹರು ಮಾಡಿ ಅರ್ಜಿ ಸಲ್ಲಿಸಬೇಕು.

ವಿವರಗಳು : ವಾಹನ 2020-23 ರ ಕಾರ್ ಮಾದರಿ (SWIFT) ಅಥವಾ ಸಮನಾದ ವಾಹನ, ಮಾಸಿಕ 2500 ಕಿ.ಮೀ ರೂ. **35000/-**, ಇ.ಎಮ್.ಡಿ ಮೊತ್ತ ರೂ. **10000/-**, ಅರ್ಜಿ ಶುಲ್ಕ ರೂ. **500/-**

ಆಸಕ್ತ ಅರ್ಜಿದಾರರು ನಿಗದಿಪಡಿಸಿದ ಅರ್ಜಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನರಗುಂದ ಇವರಲ್ಲಿ ಪಡೆದುಕೊಳ್ಳಬಹುದಾಗಿದೆ. ಟೆಂಡರ್ ಫಾರ್ಮ ನಿಗದಿಪಡಿಸಿದ ಇ.ಎಮ್.ಡಿ ಹಾಗೂ ಅರ್ಜಿ ಮೊತ್ತವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನರಗುಂದ ಇವರ ಹೆಸರಿನಲ್ಲಿ ಪಡೆದಿರಬೇಕು ಹೆಚ್ಚಿನ ಮಾಹಿತಿಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ನರಗುಂದ ಸಂಪರ್ಕಿಸಬಹುದಾಗಿದೆ.

- ಖಾಲಿ ಟೆಂಡರ್ ಫಾರ್ಮ ಪಡೆಯುವ ಕೊನೆಯ ದಿನಾಂಕ: **21/07/2023** ಸಮಯ ಸಾಯಂಕಾಲ 5:30 ರೊಳಗೆ (ರಜಾದಿನಗಳನ್ನು ಹೊರತುಪಡಿಸಿ)
- ಟೆಂಡರ್ ಫಾರ್ಮ ಪಡೆಯುವ ವಿಧ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ನರಗುಂದ ಇವರ ಹೆಸರಿನಲ್ಲಿ ಡಿ.ಡಿ(ಡಿಮಾಂಡ್ ಡ್ರಾಫ್ಟ್) ಪಡೆಯುವದು.
- ಸೀಲ್ ಮಾಡಿದ ಟೆಂಡರ್ ಫಾರ್ಮಗಳನ್ನು ಪೆಟ್ಟಿಗೆಗೆ ಹಾಕುವ ಕೊನೆಯ ದಿನಾಂಕ : **25/07/2023** ಸಮಯ ಸಾಯಂಕಾಲ 5:30 ರೊಳಗೆ (ರಜಾದಿನಗಳನ್ನು ಹೊರತುಪಡಿಸಿ)
- ಟೆಂಡರ್ ಪೆಟ್ಟಿಗೆಯನ್ನು ತೆರೆಯುವ ದಿನಾಂಕ : **27/07/2023** ಸಮಯ ಮ. 03:00 ಗಂಟೆಗೆ

**ಸಹಿ/- ಕ್ಷೇತ್ರ ಶಿಕ್ಷಣಾಧಿಕಾರಿಗಳು, ನರಗುಂದ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/68/2023-24

# ಇನ್ನರ್‌ವ್ಹೀಲ್ ಕ್ಲಬ್ ವತಿಯಿಂದ ಉಚಿತ ಆರೋಗ್ಯ ಶಿಬಿರ ಇಂದು





■ ವಿಜಯಸಾಕ್ಷಿ ಸುದ್ದಿ, ಗದಗ

ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿ ವತಿಯಿಂದ ಸಂಘಟಿಸಿರುವ ಉಚಿತ ಹೃದಯ ರೋಗ ತಪಾಸಣೆ ಹಾಗೂ ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಖ್ಯಾತ ತಜ್ಞ ವೈದ್ಯರಾದ ಡಾ. ರುದ್ರೇಶ್ ತಬಾಲಿ, ಡಾ. ಅಮಿತ್ ಜಿ ಸತ್ತೂರ, ಡಾ. ಶರಣ ಡಿ ಹಳ್ಳದ ಅವರು ಶನಿವಾರ ನಗರಕ್ಕೆ ಆಗಮಿಸಲಿದ್ದು, ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆಯಬೇಕು ಎಂದು ಇನ್ನರ್‌ವ್ಹೀಲ್ ಕ್ಲಬ್ ಪ್ರಕಟಣೆ ತಿಳಿಸಿದೆ.

ಸಂಸ್ಥೆಯು 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಸುಚಿರಾಯು ಹಾಗೂ ಹೆಚ್‌ಸಿಜಿ, ಎನ್‌ಎಂಆರ್ ಕ್ಯಾನ್ಸರ್ ಸೆಂಟರ್ ಹುಬ್ಬಳ್ಳಿ ಇವರ ಸಹಯೋಗದೊಂದಿಗೆ ಹೃದಯ ಮತ್ತು ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಂಡಿದ್ದಾರೆ.

ಶಿಬಿರಕ್ಕೆ ಆಗಮಿಸುತ್ತಿರುವ ಡಾ. ಶರಣ ಡಿ ಹಳ್ಳದ ಅವರು, ಖ್ಯಾತ ಹೃದಯ ರೋಗ ತಜ್ಞರಲ್ಲಿ ಒಬ್ಬರಾಗಿದ್ದು, ತಮ್ಮ 24 ವರ್ಷದ ಸೇವೆಯ ಅವಧಿಯಲ್ಲಿ ಸಾಕಷ್ಟು ರೋಗಿಗಳನ್ನು ಗುಣಪಡಿಸಿದ್ದಾರೆ. ಇನ್ನೋರ್ವ ಖ್ಯಾತ ಹೃದಯ ರೋಗ ತಜ್ಞರಾದ ಡಾ. ಅಮಿತ್ ಸತ್ತೂರ್ ಇಂಟರ್‌ನ್ಯಾಷನಲ್ ಕಾರ್ಡಿಯಾಲಜಿಯಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು, ಸದ್ಯ ಹುಬ್ಬಳ್ಳಿಯ ಸುಚಿರಾಯು ಆಸ್ಪತ್ರೆಯಲ್ಲಿ ಹಾರ್ಟ್ ಸ್ಪೆಶಲಿಸ್ಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಖ್ಯಾತ ಕ್ಯಾನ್ಸರ್ ತಜ್ಞ ವೈದ್ಯರಾದ ಡಾ. ರುದ್ರೇಶ್ ತಬಾಲಿ ಎಲ್ಲ ತರಹದ ಕ್ಯಾನ್ಸರ್‌ಗಳಿಗೆ ಸರ್ಜರಿ ಮಾಡುವಲ್ಲಿ ನೈಪುಣ್ಯತೆ ಹೊಂದಿದ್ದು, ಇದುವರೆಗೂ ಸಾವಿರಕ್ಕೂ ಹೆಚ್ಚು ಕ್ಯಾನ್ಸರ್ ಸರ್ಜರಿ ಮಾಡಿ ಯಶಸ್ವಿಯಾಗಿದ್ದಾರೆ. ಸಾರ್ವಜನಿಕರು ಶಿಬಿರದ ಸದವಕಾಶ ಪಡೆದುಕೊಳ್ಳುವಂತೆ ಇನ್ನರ್‌ವ್ಹೀಲ್ ಕ್ಲಬ್ ಪ್ರಕಟಣೆ ತಿಳಿಸಿದೆ.

# ವಾಣಿಜ್ಯ ಮಳಿಗೆಗಳ ಮರು ಟೆಂಡರ್ ಗೆ ಆಗ್ರಹಿಸಿ ಮನವಿ



■ ವಿಜಯಸಾಕ್ಷಿ ಸುದ್ದಿ, ಗದಗ

ಕರವೇ ಗದಗ-ಬೆಟಗೇರಿ ನಗರ ಘಟಕದ ವತಿಯಿಂದ ಅವಳಿ ನಗರದ ವ್ಯಾಪ್ತಿಗೆ ಬರುವ ವಾಣಿಜ್ಯ ಮಳಿಗೆಗಳನ್ನು ಮರು ಟೆಂಡರ್ ಮಾಡಬೇಕೆಂದು ನಗರ ಘಟಕದ ಅಧ್ಯಕ್ಷ ದಾವಲಸಾಬ್ ಎಮ್ ತಹಸೀಲ್ದಾರ ನೇತೃತ್ವದಲ್ಲಿ ನಗರಸಭೆಯ ಪೌರಾಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿ ಮಾತನಾಡಿದ ದಾವಲಸಾಬ ತಹಸೀಲ್ದಾರ, ಹಲವು ವರ್ಷಗಳಿಂದ ಗದಗ-ಬೆಟಗೇರಿ ನಗರಸಭೆಯ ವ್ಯಾಪ್ತಿಗೆ ಬರುವ ವಾಣಿಜ್ಯ ಮಳಿಗೆಗಳನ್ನು ಮರು ಟೆಂಡರ್ ಮಾಡದೇ ಬಿಡಲಾಗಿದೆ. ಶೀಘ್ರವಾಗಿ ಟೆಂಡರ್ ಪ್ರಕ್ರಿಯೆ ನಡೆಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಹಿಳಾ ಅಧ್ಯಕ್ಷೆ ಆಶಾ ಜೂಲಗುಡ್ಡ, ರತ್ನಮ್ಮ ಯಲಬುರ್ಗಾ, ಶೋಭಾ ಕಲಾಲ, ಜಿಲ್ಲಾ ಉಪಾಧ್ಯಕ್ಷ ಮುತ್ತಣ್ಣ ಚೌಡಣ್ಣವರ್, ಗದಗ ತಾಲೂಕಾಧ್ಯಕ್ಷ ನಾಗಪ್ಪ ಅಣ್ಣಿಗೇರಿ, ಯುವ ಘಟಕದ ಜಿಲ್ಲಾ ಕಾರ್ಯದರ್ಶಿ ವಿನಾಯಕ ಬದಿ, ಬಸವರಾಜ್ ಮೇಟಿ, ಖಾಸಿಂಸಾಬ್ ರೋಣದ, ತೌಶಿಫ್ ಡಾಲಯತ್, ಇರ್ಫಾನ್ ತಾಳಿಕೋಟೆ, ಸಿರಾಜ್ ಹೊಸಮನಿ, ಹುಸೇನ್ ಅಕ್ಕಿ, ಮಹಾಂತೇಶ ನಡಗೇರಿ, ಸಮೀರ ಬಾಳಿಕಾಯಿ, ರವಿ ಮಲ್ಲಾಡದ, ಮಂಜು ಬಳ್ಳಾರಿ, ಸಲೀಂ ಬೋದ್ಲೆಖಾನ, ಗೌಸುಸಾಬ ಶಿರಹಟ್ಟಿ, ಸಲೀಂ ಶಿರವಾರ್, ದ್ಯಾಮಣ್ಣ ಈಳಗೇರೆ, ಮಲ್ಲೇಶ ಜಕ್ಕನಗೌಡರ, ಅಲ್ತಾಫ ತಾಳಿಕೋಟಿ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

# ಗದಗ ಶೂಟಿಂಗ್ ಅಕಾಡೆಮಿಗೆ 3 ಚಿನ್ನ, 2 ಕಂಚು



■ ವಿಜಯಸಾಕ್ಷಿ ಸುದ್ದಿ, ಗದಗ

ಬೆಂಗಳೂರಿನ ಸಾಯಿ ಶೂಟಿಂಗ್ ರೇಂಜ್‌ನಲ್ಲಿ ಇತ್ತೀಚೆಗೆ ನಡೆದ 11ನೇ ರಾಜ್ಯಮಟ್ಟದ ಶೂಟಿಂಗ್ ಕ್ರೀಡಾಕೂಟದಲ್ಲಿ ಗದಗ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ ಶೂಟರ್‌ಗಳು 3 ಚಿನ್ನ, 2 ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಅಕಾಡೆಮಿಯ ಮನ್ವಿತಾ ಎಂ ಬಡ್ನಿ (ಚಿನ್ನ), ಅಮೃತಾ ಜಿ ಕಬಾಡಿ (ಚಿನ್ನ), ಸಂಜನಾ ಎಸ್ ಚಿಕ್ಕನಗೌಡರ (ಚಿನ್ನ) 10 ಮೀಟರ್ ಏರ್‌ರೈಫಲ್‌ನ ಸಬ್ಯುತ್ ಟೀಮ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಹಾಗೂ ಸಿದ್ಧಾರ್ಥ ಎಂ ಬಡ್ನಿ 10 ಮೀಟರ್ ಏರ್‌ಪಿಸ್ತೂಲ್ ಮೆನ್ಸ್ ಸಬ್ಯೂತ್ ವೈಯಕ್ತಿಕ ಕಂಚಿನ ಪದಕ ತನ್ನದಾಗಿಸಿಕೊಂಡಿದ್ದಾರೆ ಹಾಗೂ ತಂಡದಲ್ಲಿ ಕಂಚಿನ ಪದಕವನ್ನು ಪಡೆದಿದ್ದಾರೆ.

ಸಾಧನೆಗೈದ ಶೂಟರ್‌ಗಳನ್ನು ಗದಗ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರಾಜರಾಜೇಶ್ವರಿ ಮುಖ್ಯೋಪಾಧ್ಯಾಯಿನಿ ಮಂಜುಳಾ ದಾನಿನ್, ಕೆಎಲ್‌ಇ ಸಂಸ್ಥೆಯ ಸಿಬಿಎಸ್‌ಸಿ ಶಾಲೆಯ ಮುಖ್ಯೋಪಾಧ್ಯಾಯೆ ಕಲ್ಪನಾ ಚಚಡಿ, ಮೀತು ದತ್ತಾ, ನಗರಸಭೆ ಉಪಾಧ್ಯಕ್ಷ ಶ್ರೀನಿವಾಸ ಹುಯಿಲಗೋಳ, ಗದಗ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ ಅಧ್ಯಕ್ಷ ಮುರಘರಾಜೇಂದ್ರ ಎಂ ಬಡ್ನಿ, ನ್ಯಾಷನಲ್ ಶೂಟರ್ ಪ್ರತಿಭಾ ಎಂ ಬಡ್ನಿ, ಶೂಟರ್‌ಗಳಾದ ವರಲಕ್ಷ್ಮೀ ಹೊಂಬಾಳಿ, ಬಸವರಾಜ ಹೊಂಬಾಳಿ ಸೇರಿದಂತೆ ಪಾಲಕರು, ಅಕಾಡೆಮಿಯ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ಗದಗ ಜಿಲ್ಲೆ ಬರಪೀಡಿತ ಎಂದು ಘೋಷಣೆ ಮಾಡಿ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯನ್ನು ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಗದಗ ಜಿಲ್ಲಾ ಅಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಹಾಗೂ ಗ್ರಾಮ ಘಟಕದ ಅಧ್ಯಕ್ಷ ಹುಚ್ಚೀರಪ್ಪ ಜೋಗಿನ ಮತ್ತು ಪದಾಧಿಕಾರಿಗಳು ಅಪರ್ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಗದಗ ಜಿಲ್ಲಾದ್ಯಾಂತ ಮುಂಗಾರು ಮಳೆ ಜೂನ್ ತಿಂಗಳಲ್ಲಿ ಕೈಕೊಟ್ಟಿದೆ. ಜುಲೈ ತಿಂಗಳಲ್ಲಿ ಅಲ್ಲಲ್ಲಿ ಅಲ್ಪ ಸ್ವಲ್ಪ ಜಿಟಿಜಿಟಿ ಮಳೆ ಆಗಿದೆ. ಆದರೂ ಕೂಡ ಭೂಮಿಯಲ್ಲಿ ತೇವಾಂಶ ಇಲ್ಲದ ಕಾರಣ ರೈತರು 30% ಬಿತ್ತನೆ ಮಾಡಿದ್ದು, ಆದರೆ ಸಾಕಷ್ಟು ಪ್ರಮಾಣದಲ್ಲಿ ಇಲ್ಲಿವರೆಗೂ ಮಳೆ ಆಗದೇ ಇರುವುದರಿಂದ ಬೆಳೆಗಳು ಬಿಸಿಲಿನ ತಾಪಕ್ಕೆ ಒಣಗಿದ್ದು ಈ ವರ್ಷ ರೈತರನ್ನು ಕಂಗಾಲಾಗುವಂತೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣವೇ ಗದಗ ಜಿಲ್ಲೆ ಬರಪೀಡಿತ ಎಂದು ಘೋಷಣೆ ಮಾಡಿ ಎಕರೆಗೆ ಕನಿಷ್ಠ 30 ಸಾವಿರ ರೂಪಾಯಿಗಳಂತೆ ಬರ ಪರಿಹಾರ ಕೊಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಿಲಾಗಿದೆ.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ವಿಮೆ ತುಂಬಿದ ರೈತರಿಗೆ ಸರಕಾರವೇ ಬೆಳೆವಿಮೆ ಕೊಡಬೇಕು. ಯಾಕೆಂದರೆ ಖಾಸಗಿ ಕಂಪನಿಗಳು ರೈತರಿಗೆ ಸರಿಯಾದ ಸಮಯಕ್ಕೆ ಬಿಡುಗಡೆ ಮಾಡುವುದಿಲ್ಲ. ಅಷ್ಟೇ ಅಲ್ಲ ಸರಿಯಾದ ಸಮಯಕ್ಕೆ ಜಿಪಿಎಸ್ ಮಾಡುವುದಿಲ್ಲ. ಜೊತೆಗೆ ರೈತರಿಗೆ ಖಾತೆ ಅದಲು ಬದಲು ಮಾಡಿ ರೈತರಿಗೆ ಮೋಸ ಮಾಡುತ್ತಾರೆ. ಈ ರೀತಿಯಾಗಿ ಮಾಡುವುದರಿಂದ ಹಳ್ಳಿಯ ರೈತರ ಕಷ್ಟವನ್ನು ಕೇಳೋರಿಲ್ಲ ಹೇಳೋರಿಲ್ಲ ಎನ್ನುವಂತಹ ಪರಿಸ್ಥಿತಿ ಹಳ್ಳಿಯಲ್ಲಿ ನಿರ್ಮಾಣವಾಗಿದೆ ಎಂದು ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಶರಣಪ್ಪ ಜೋಗಿನ, ವೆಂಕಟೇಶ್ ಸತ್ಯಪ್ಪನವರ, ವೆಂಕಟೇಶ್ ಪೂಜಾರ,ಹಾಗೂ ರೈತ ಮುಖಂಡರು ಇದ್ದರು.

### ತಾಲೂಕಾ ಜೈನ ಸಮಾಜದ ವತಿಯಿಂದ ತಹಸೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ

# ಜೈನ ಮುನಿಗಳ ಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಿ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಬೆಳಗಾವಿ ಜಿಲ್ಲೆಯ ಹಿರೇ-ಕೊಡಿ ನಂದಿ ಪರ್ವತ ಆಶ್ರಮದ ಜೈನ ಮುನಿ ಕಾಮಕುಮಾರನಂದಿ ಮಹಾರಾಜರ ಕ್ರೂರ ಹತ್ಯೆಯನ್ನು ಖಂಡಿಸಿ, ಶುಕ್ರವಾರ ತಾಲೂಕಿನ ಜೈನ ಸಮಾಜದ ವತಿಯಿಂದ ಪಟ್ಟಣದ ಜೈನ ಮಂದಿರದಿಂದ ತಹಸೀಲ್ದಾರ ಕಾರ್ಯಾಲಯದವರೆಗೆ ಮೌನ ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದರು.

ತಹಸೀಲ್ದಾರ ಕಚೇರಿ ಅವರಣದಲ್ಲಿ ಜೈನ ಸಮಾಜದ ಮುಂಖಂಡ ಬಬ್ಬಣ ಜೈನ ಮಾತನಾಡಿ, ಸಾಧು-ಸಂತರ ನಾಡು ನಮ್ಮದು. ನಮ್ಮ ಧರ್ಮದ ಮುನಿಗಳ ಕ್ರೂರ ಹತ್ಯೆ ನಮ್ಮ ಸಮಾಜಕ್ಕೆ ನೋವುಂಟುಮಾಡಿದೆ. ಈ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇವೆ. ಹತ್ಯೆ ಮಾಡಿದವರ ವಿರುದ್ಧ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಕಠಿಣ ಶಿಕ್ಷೆ ಜರುಗಿಸಬೇಕು ಎಂದು ಮನವಿ ಮಾಡಿದರು.

> ಅಲ್ಪ ಸಂಖ್ಯಾತ ಜೈನ ಮುನಿಗಳಿಗೆ, ಜೈನ ಮಂದಿರ, ಬಸದಿ, ಜೈನ ಮಠಗಳಿಗೆ ಯೋಗ್ಯ ರಕ್ಷಣೆ ಒದಗಿಸಬೇಕು. ನಮ್ಮ ಸಮಾಜಕ್ಕೆ ಸರಕಾರ ನ್ಯಾಯ ಮತ್ತು ರಕ್ಷಣೆ ಒದಗಿಸಿಕೊಡಬೇಕು. ಮುನಿಗಳ ಹತ್ಯೆಯು ದೇಶ ಮತ್ತು ರಾಜ್ಯಕ್ಕೆ ಬಹು ದೊಡ್ಡ ಅವಮಾನವಾಗಿದೆ. ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು.
>
> **– ಪವನ ಚೋಪ್ರಾ.**
> ಜೈನ ಸಮಾಜದ ಮುಖಂಡರು.

ಸಾಮಾಜಿಕ ಕಾರ್ಯಕರ್ತ ಅಡಿವೆಪ್ಪ ಛಲವಾದಿ ಮಾತನಾಡಿ, ಸದಾ ಸರ್ವ ಸಮಾಜದ ಒಳಿತಿಗೆ ಶ್ರಮಿಸುವ ಜೈನ ಸಮಾಜದ ಮುನಿಗಳನ್ನು ಊಹಿಸಲೂ ಸಾಧ್ಯವಾಗದಷ್ಟು ಕ್ರೂರವಾಗಿ ಹತ್ಯೆ ಮಾಡಿದ ಆರೋಪಿಗಳನ್ನು ಗಲ್ಲು ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.

ಉಪ ತಹಸೀಲ್ದಾರ ಎಸ್ ಎಸ್ ಬಿಚ್ಚಾಲಿ ಮನವಿ ಸ್ವೀಕರಿಸಿ, ನಿಮ್ಮ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಕಳುಸಲಾಗುವುದು ಎಂದರು. ಈ ಸಂಧರ್ಭದಲ್ಲಿ ಎ ಕೆ ಜೈನ, ಎ ಟಿ ಅಂಗಡಿ, ಎಸ್ ಆರ್ ಜೈನ, ಹೀರಚಂದ ಜೈನ, ಗೌತಮ್ ಚೋಪ್ರಾ, ಮಹಾವೀರ ಜೈನ, ವಿಕ್ರಮ್ ಜೈನ, ದೀನ್ ಜೈನ್, ಎಂ ಎನ್ ತವನಪ್ಪನವರ, ಸುರೇಶ ಕಳಾಸಪುರ, ಸುರೇಶ ಜೈನ, ಹಸನ ಅಳವುಂಡಿ, ಸುಭಾಷ ಜೈನರ್, ಯು ಆರ್ ಜೈನ ಇತರರು ಹಾಜರಿದ್ದರು.

### ಗದಗ- ಬೆಟಗೇರಿ ಲಯನ್ಸ್ ಕ್ಲಬ್ ನಿಂದ ನೇತ್ರದಾನ ಕುರಿತು ಜಾಗೃತಿಯ ಜಾಥಾ

# ಮರಣಾನಂತರ ನೇತ್ರಗಳನ್ನು ಮಣ್ಣು ಮಾಡಬೇಡಿ



> ನೇತ್ರದಾನಕ್ಕೆ ಇಂದೇ ನಿಮ್ಮ ಹೆಸರು ನೋಂದಾಯಿಸಿಕೊಳ್ಳಿ. ಮರಣಾನಂತರ ತಕ್ಷಣ ತಿಳಿಸಿದರೆ ನೇತ್ರಗಳನ್ನು ಪಡೆಯಲಾಗುವದು. ಹೆಸರು ನೋಂದಾಯಿಸದಿದ್ದರೂ ಕುಟುಂಬವದವರು ಒಪ್ಪಿಗೆ ಸೂಚಿಸಿದರೆ ತಜ್ಞ ವೈದ್ಯರು ಸ್ಥಳಕ್ಕೆ ಆಗಮಿಸಿ ನೇತ್ರ ಸಂಗ್ರಹಿಸುವರು. ಬಿಪಿ, ಶುಗರ್ ಇದ್ದವರೂ ಸಹ ನೇತ್ರದಾನ ಮಾಡಬಹುದು. ನೇತ್ರದಾನ ಜೀವನದಾನ, ನೇತ್ರಗಳು ಪವಿತ್ರವಾದವು. ಅವುಗಳನ್ನು ಮಣ್ಣು ಮಾಡಬೇಡಿ, ಸುಡಬೇಡಿ. ದಾನ ಮಾಡಿ.
>
> **– ಡಾ. ವೀರೇಶ ಹಂಚಿನಾಳ.**

■ ವಿಜಯಸಾಕ್ಷಿ ಸುದ್ದಿ, ಗದಗ

ವ್ಯಕ್ತಿ ಸಾವನ್ನಪ್ಪಿದ ಬಳಿಕ ಮುಚ್ಚಿದ ಕಣ್ಣುಗಳು ಇನ್ನೋರ್ವ ವ್ಯಕ್ತಿ ಜಗತ್ತನ್ನು ನೋಡುವಂತೆ ಮಾಡಲು ನೇತ್ರದಾನಕ್ಕೆ ಮುಂದಾಗಿ ಎಂದು ಡಾ. ವೀರೇಶ ಹಂಚಿನಾಳ ಅಭಿಪ್ರಾಯಪಟ್ಟರು.

ಲಯನ್ಸ್ ಕ್ಲಬ್ ಆಫ್ ಗದಗ-ಬೆಟಗೇರಿ ಹಾಗೂ ಎಸ್‌ಜಿಎಂ ನೇತ್ರ ಭಂಡಾರ ಮತ್ತು ಸಂಶೋಧನಾ ಪ್ರತಿಷ್ಠಾನ ಟ್ರಸ್ಟ್ ಶುಕ್ರವಾರ ಗದಗ ನಗರದಲ್ಲಿ ಏರ್ಪಡಿಸಿದ್ದ ನೇತ್ರದಾನ ಕುರಿತಾದ ಜಾಗೃತಿ, ತಿಳುವಳಿಕೆ ಜಾಥಾದಲ್ಲಿ ಅವರು ಮಾತನಾಡಿದರು.

ಮರಣಾನಂತರ ನೇತ್ರಗಳನ್ನು ದಾನವಾಗಿ ನೀಡಲು ಪ್ರತಿಜ್ಞೆಯನ್ನು ಮಾಡಿ, ತಮ್ಮ ಹೆಸರನ್ನು ನೋಂದಾಯಿಸಬೇಕು. ನೇತ್ರದಾನವು ಪವಿತ್ರವಾದ ಮಾನವತಾ ಸೇವೆಯಾಗಿದೆ.

ಈ ಆಂದೋಲನದ ಜಾಗೃತಿಯನ್ನು ಸಾಮಾನ್ಯ ಜನರಲ್ಲಿ ಮೂಡಿಸುವುದೇ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದರು.

ನಮ್ಮ ದೇಶದಲ್ಲಿ ಲಕ್ಷಾಂತರ ದೃಷ್ಟಿಹೀನರು ದೃಷ್ಟಿಯನ್ನು ಪಡೆಯಲು ಕುತೂಹಲದಿಂದ ಕಾಯುತ್ತಿದ್ದಾರೆ. ಬೇರೆಯವರು ನೇತ್ರದಾನ ಮಾಡಿದರೆ ಮಾತ್ರ ಈ ಜನರು ಜಗತ್ತನ್ನು ನೋಡಬಲ್ಲರು. ಈ ಕಾರ್ಯ ಅತ್ಯಂತ ಮಹತ್ವದ್ದು ಹಾಗೂ ಪುಣ್ಯಕರವಾದದ್ದು ಎಂದರು.

ತೋಂಟದಾರ್ಯ ಮಠದಿಂದ ಆರಂಭಗೊಂಡ ಈ ಜಾಥಾ ಮಹೇಂದ್ರಕರ ವೃತ್ತ, ಹುಯಿಲಗೋಳ ನಾರಾಯಣರಾವ್ ವೃತ್ತ, ಬಸವೇಶ್ವರ ವೃತ್ತ, ಕೆ ಎಚ್ ಪಾಟೀಲ ವೃತ್ತ, ಮಾಳಶೆಟ್ಟಿವೃತ್ತ, ಕೃಷ್ಣಾ ಟಾಕೀಸ್ ಮಾರ್ಗವಾಗಿ ಮರಳಿ ತೋಂಟದಾರ್ಯ ಮಠದ ಬಳಿ ಕೊನೆಗೊಂಡಿತು. ಮಾರ್ಗದಲ್ಲಿ ಸಾರ್ವಜನಿಕರಿಗೆ, ವ್ಯಾಪಾರಸ್ಥರಿಗೆ ನೇತ್ರದಾನದ ಕುರಿತು ಜಾಗೃತಿಯ ಭಾಷಣ, ತಿಳುವಳಿಕೆಯ ಕರಪತ್ರಗಳನ್ನು ವಿತರಿಸಿ ಜಾಗೃತಿ ಮೂಡಿಸಲಾಯಿತು.

ಕ್ಲಬ್‌ನ ಗದಗ-ಬೆಟಗೇರಿ ಅಧ್ಯಕ್ಷ ರಮೇಶ ಶಿಗ್ಲಿ, ಕಾರ್ಯದರ್ಶಿ ಪ್ರವೀಣ ವಾರಕರ, ಖಜಾಂಚಿ ರಾಜು ಮಲ್ಲಾಡದ, ಝಡ್ ಸಿ ದತ್ತು ಬೇವಿನಕಟ್ಟಿ, ಡಾ. ಜೆ ಸಿ ಶಿರೋಳ, ಎಂ ಬಿ ಸಿಕ್ಕೇದೇಸಾಯಿ, ಅರವಿಂದ ಪಟೇಲ್, ಅನಂತ ಅಮೀಚಂದ, ಅಶ್ವಥ್ ಸುಲಾಖೆ, ಲಯನ್ ಲೇಡಿ ವಿಂಗ್‌ನ ಅಧ್ಯಕ್ಷೆ ಸಾವಿತ್ರಿ ಶಿಗ್ಲಿ, ಕಾರ್ಯದರ್ಶಿ ಅಮೃತಾ ವಾರಕರ, ಖಜಾಂಚಿ ಸುರೇಖಾ ಮಲ್ಲಾಡದ, ವೀಣಾ ಪೋತ್ನೀಸ್ ಸೇರಿದಂತೆ ಕ್ಲಬ್‌ನ ಸದಸ್ಯರು ಪಾಲ್ಗೊಂಡಿದ್ದರು.

ಗದುಗಿನ ವೀರೇಶ್ವರ ಪುಣ್ಯಾಶ್ರಮದ ಅಂಧ ವಿದ್ಯಾರ್ಥಿಗಳು, ಅಂಧ ಪ್ರತಿಭಾನ್ವಿತರೂ ಜಾಥಾದಲ್ಲಿ ಪಾಲ್ಗೊಳ್ಳುವ ಮೂಲಕ ಕಣ್ಣಿಲ್ಲದ ಅಂಧರ ಬದುಕಿನ ಕಷ್ಟಗಳಿಗೆ ಸಾಕ್ಷೀಯಾದರು.

# ವಾರ್ಡ್ ನಂ.20ರಲ್ಲಿ ಕಳಪೆ ಕಾಮಗಾರಿ: ಚಾಂದಸಾಬ ಕೊಟ್ಟೂರ ಆರೋಪ

■ ವಿಜಯಸಾಕ್ಷಿ ಸುದ್ದಿ, ಗದಗ

ವಾರ್ಡ್ ನಂ.20ರಲ್ಲಿ ಪಿ ಸಿ ಶಾಬಾದಿಮಠರವರ ಮನೆಯ ಮುಂಭಾಗದಲ್ಲಿ ನಡೆಯುತ್ತಿರುವ ಗಟಾರ ನಿರ್ಮಾಣ ಕಾಮಗಾರಿ ಕಳಪೆಯಾಗಿದೆ. ಸುಸ್ಥಿತಿಯಲ್ಲಿದ್ದ ಸಿ ಸಿ ರಸ್ತೆಯ ಮೇಲೆಯೇ ಇಂಟರಲಾಕ್ ಫೇವರ್ ಜೋಡಣೆ ಕಾಮಗಾರಿ ಮುಗಿಸಲಾಗಿದೆ. ಇನ್ನೂ ಹಲವು ಕಾಮಗಾರಿಗಳಲ್ಲಿ ಈ ಪ್ರಮಾಣದ ಭ್ರಷ್ಟಾಚಾರ ಕಂಡುಬರುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ ಎಂದು ನಗರಸಭೆ ಮಾಜಿ ಸದಸ್ಯ ಚಾಂದಸಾಬ ಕೊಟ್ಟೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ವಾರ್ಡಿನ ಹರ್ಲಾಪೂರವರ ಮನೆಯ ಹತ್ತಿರ ಇರುವ 30 ಲಕ್ಷ ರೂ. ಅಂದಾಜು ವೆಚ್ಚದ ಶೌಚಾಲಯ ಕಾಮಗಾರಿ ಕಳೆದ ಎರಡು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಹಾಗೆ ಅರ್ಧಕ್ಕೆ ನಿಲ್ಲಿಸಿದ್ದಾರೆ. ಮಳೆಗಾಲದ ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅದರಲ್ಲೂ ಮಹಿಳೆಯರು, ವಯಸ್ಸಾದವರು, ಮಕ್ಕಳು ಬಯಲು ಶೌಚಾಲಯಕ್ಕೆ ಹೋಗುವ ಪರಿಸ್ಥಿತಿ ಇದೆ. ಇಂತಹ ಕಾಮಗಾರಿಯನ್ನು ಪೂರ್ಣಗೊಳಿಸುವುದನ್ನು ಬಿಟ್ಟು ಸರಿಯಾಗಿರುವ ರಸ್ತೆ, ಇನ್ನಿತರ ಕಾಮಗಾರಿಗಳನ್ನು ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಇಲ್ಲಿ ಸಾರ್ವಜನಿಕರ ತೆರಿಗೆ ಹಣ ಲೂಟಿ ಮಾಡುವ ಹುನ್ನಾರ ನಡೆದಿದೆ ಎಂದು ಅವರು ಆರೋಪಿಸಿದ್ದಾರೆ.

# ಜು.19 ರಂದು ಭಂಡಿವಾಡ ಗ್ರಾಮ ಸಭೆ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

2023-24ನೇ ಸಾಲಿನ 1ನೇ ಸುತ್ತಿನ ಭಂಡಿವಾಡ ಗ್ರಾಮಸಭೆಯನ್ನು ಜುಲೈ 19 ರಂದು ಬೆಳಿಗ್ಗೆ 11.30 ಕ್ಕೆ ಗ್ರಾಮದ ಮಾರುತಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜುಲೈ 18 ರಂದು ವಿವಿಧ ವಾರ್ಡ್ ಗಳ ವಾರ್ಡ್ ಸಭೆಗಳು ನಡೆಯಲಿವೆ. ವಿವಿಧ ಇಲಾಖೆಗಳಿಂದ ಕೈಗೊಂಡ ಯೋಜನೆಗಳ ಬಗ್ಗೆ ಇಲಾಖಾವಾರು ಚರ್ಚೆ, ವಿವಿಧ ಯೋಜನೆಯಡಿ ಫಲಾನುಭವಿಗಳ ಆಯ್ಕೆ, ಸಾರ್ವಜನಿಕರ ಕುಂದುಕೊರತೆ ಹಾಗೂ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳ ಚರ್ಚೆಗಳನ್ನು ಗ್ರಾಮಸಭೆಯಲ್ಲಿ ಕೈಗೊಳ್ಳಲಾಗುತ್ತದೆ.

ಗ್ರಾಮ ಸಭೆಗೆ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಆರೋಗ್ಯ ಸಹಾಯಕಿಯರು, ಮಹಿಳೆಯರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು ಭಾಗವಹಿಸಬೇಕೆಂದು ಭಂಡಿವಾಡ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಅಶ್ವಿನಿ ರಾಠೋಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆಲ್ ಕರ್ನಾಟಕ ಬ್ಯೂಟಿಷಿಯನ್ಸ್ ಅಸೋಸಿಯೇಷನ್‌ನಿಂದ ಕಾರ್ಯಕ್ರಮ

# ಸಂಘಟನೆಯಿಂದ ಸಾಧನೆ ಸಾಧ್ಯ



> ಹೊಸ ಬ್ಯೂಟಿ ಪಾರ್ಲರ್ ಪ್ರಾರಂಭಿಸುವವರು ಕನಿಷ್ಠ 2 ವರ್ಷಗಳ ತರಬೇತಿ ಪಡೆದಿರಬೇಕು. ಹತ್ತಿರದಲ್ಲಿಯೇ ಮತ್ತೊಂದು ಪಾರ್ಲರ್ ತೆರೆಯಲು ಅವಕಾಶವಿಲ್ಲ. ಗುಣಮಟ್ಟದ ಸೌಂದರ್ಯ ವರ್ಧಕಗಳನ್ನು ಉಪಯೋಗಿಸುವದು ಕಡ್ಡಾಯವಾಗಿದೆ. ಎಲ್ಲ ಪಾರ್ಲರ್‌ಗಳಲ್ಲಿ ಆಸ್ಪತ್ರೆ, ಪೊಲೀಸ್ ಠಾಣೆಯ ಫೋನ್ ನಂಬರ್‌ಗಳನ್ನು ಪ್ರದರ್ಶಿಸಬೇಕು. ನಿಯಮ ಪಾಲಿಸಿ ಅಸೋಸಿಯೇಷನ್‌ಗೆ ಒಳ್ಳೆಯ ಹೆಸರು ತನ್ನಿ.
>
> **– ಎನ್ ನಾಗವೇಣಿ.**
> ಕರ್ನಾಟಕ ಬ್ಯೂಟಿಷಿಯನ್ಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷೆ.

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ವೃತ್ತಿಯಲ್ಲಿ ಯಶಸ್ಸು ಸಾಧಿಸಬೇಕಾದರೆ ತಾಳ್ಮೆ, ಪರಸ್ಪರ ಸಹಕಾರ, ವೃತ್ತಿಯಲ್ಲಿ ನೈಪುಣ್ಯತೆ ಮುಖ್ಯವಾಗಿರುತ್ತದೆ. ಅಂತಹ ವೃತ್ತಿಗಳಲ್ಲಿ ಬ್ಯೂಟಿಷಿಯನ್ ವೃತ್ತಿಯೂ ಸಹ ಒಂದಾಗಿದೆ ಎಂದು ಆಲ್ ಕರ್ನಾಟಕ ಬ್ಯೂಟಿಷಿಯನ್ಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷೆ ಎನ್ ನಾಗವೇಣಿ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಪುರಸಭೆ ಪದವಿ ಕಲಾ ಮಹಾವಿದ್ಯಾಲಯದ ಸಭಾ ಭವನದಲ್ಲಿ ಅಸೋಸಿಯೇಷನ್‌ನ ಲಕ್ಷ್ಮೇಶ್ವರ ಘಟಕ ಹಮ್ಮಿಕೊಂಡಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವೃತ್ತಿ ಬಾಂಧವರ ಹಿತರಕ್ಷಣೆಗಾಗಿ ಸಂಘಟನೆ ಅವಶ್ಯ. ಸಂಘಟನಾ ಶಕ್ತಿಯಿಂದ ಬೇಕು-ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದು. ಅದಕ್ಕಾಗಿ ರಾಜ್ಯಾದ್ಯಂತ ಜಿಲ್ಲಾ, ತಾಲೂಕು ಘಟಕ ಮಾಡಲಾಗಿದೆ. ಈ ಅಸೋಸಿಯೇಷನ್ ಅಸ್ತಿತ್ವಕ್ಕೆ ಬರಲು ಮುಖ್ಯವಾಗಿ ನಮ್ಮ ಬ್ಯೂಟಿ ಪಾರ್ಲರ್‌ನವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಲ್ಪಿಸುವದಾಗಿದೆ.

ಪುರಸಭೆ ಮಾಜಿ ಅಧ್ಯಕ್ಷೆ ಅಶ್ವಿನಿ ಅಂಕಲಕೋಟಿ ಮಾತನಾಡಿ, ಮಹಿಳೆಯರಲ್ಲಿ ಅಡಗಿರುವ ಸೌಂದರ್ಯಕ್ಕೆ ಮತ್ತಷ್ಟು ಮೆರುಗು ನೀಡುವ ಕಾರ್ಯವನ್ನು ಬ್ಯೂಟಿಷಿಯನ್ಸ್ ಮಾಡುತ್ತಿದ್ದಾರೆ. ಬ್ಯೂಟಿ ಪಾರ್ಲರ್ ಉದ್ಯೋಗದಿಂದ ಇಂದು ಸಾಕಷ್ಟು ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಯಾವುದೇ ಉದ್ಯೋಗ ಮಾಡಿದರೂ ಪ್ರಾಮಾಣಿಕ ಪ್ರಯತ್ನಕ್ಕೆ ಉತ್ತಮ ಫಲ ದೊರೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಫಕ್ಕೀರಸ್ವಾಮಿಗಳು ಕಲ್ಮಠ, ಅಸೋಸಿಯೇಶನ್‌ನ ಗಜೇಂದ್ರಗಡ ನಿರ್ದೇಶಕಿ ವಿದ್ಯಾ ರಾಯಬಾಗಿ, ಗದಗ ಅಧ್ಯಕ್ಷೆ ಲತಾ ಹಬಿಬ್, ನಿರ್ದೇಶಕಿ ಶೋಭಾ ಗುಂಡಪ್ಪನವರ, ಮೇಘಾ, ಗೀತಾ, ಸಿಡಿಪಿಓ ಮೃತ್ಯುಂಜಯ ಜಿ., ಮಲ್ಲಿಕಾರ್ಜುನ ಕಳಸಾಪೂರ, ಡಿ ಎಂ ಪೂಜಾರ, ಭಜಂತ್ರಿ, ಮುಂತಾದವರಿದ್ದರು. ಶಶಿಕಲಾ ಬದಿ, ಮಧು, ಲಕ್ಷ್ಮೀ ಕಲ್ಮಠ, ಸಹನಾ ನಿರೂಪಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka